UNIVERSAL LIBRARY
OU_200034
UNIVERSAL LIBRARY

OSMANIA UNIVERSITY LIBRARY

Call No. K922 H28K Accession No. K4770

Author హరి హర

Title [illegible] 1955

This book should be returned on or before the date last marked below.

" ಸಿರಿಗನ್ನಡಂ ಗೆಲ್ಗೆ "

ಹರಿಹರನು ಚಿತ್ರಿಸಿರುವ

# ಕೆಲವು ಶರಣರು

ತ. ಶ್ರೀಕಂಠಯ್ಯ, ಎಂ. ಎ.

ಪ್ರಕಾಶಕರು:

**ಕರ್ನಾಟಕ ಸಂಘ, ರಾಯಚೂರು.**

ಡಿಸೆಂಬರ್, ೧೯೫೫

ರಾಯಚೂರು ಕರ್ನಾಟಕ ಸಂಘದ ಪ್ರಕಟನೆ - ೧೪

ಪುಸ್ತಕದ ಸರ್ವಸ್ವಾಮ್ಯವೂ ಲೇಖಕರದು

ಬೆಲೆ : ಹತ್ತಾಣೆ

# ಪ್ರಕಾಶಕರ ನುಡಿ.

ಈ ಹೊತ್ತಗೆಯು ಸಂಘದ ಪ್ರಕಟನೆ. ಸಂಘವು ಹುಟ್ಟಿದ ನಾಲ್ಕನೇ ವರ್ಷದಲ್ಲಿ ಪ್ರಕಟಣೆಯ ಕೆಲಸ ಕೈಕೊಂಡು "ಕನ್ನಡ ಕುಸುಮ ಮಾಲೆ" ಯನ್ನು ಪ್ರಾರಂಭಿಸಿತು. ಈ ಮಾಲೆಯಲ್ಲಿ ೧೨ ಚಿಕ್ಕ ಹೊತ್ತಗೆಗಳನ್ನು ಪೋಣಿಸಲಾಯಿತು. ಅವೆಲ್ಲ ಸಣ್ಣ ಸಣ್ಣ ಕತೆಗಳು. ಮುಂದೆ ಕಾರಣಾಂತರದಿಂದ ಮಾಲೆ ಮುಂದೆ ಸಾಗದೆ ನಿಂತಿತು. ಆ ಮೇಲೆ ಸಂಘವು ಕೆಲವು ಬಿಡಿ ಹೊತ್ತಗೆಗಳನ್ನು ಹೊರಗೆ ಹಾಕಿತು. ಸಂಘವು ನಡೆಸುತ್ತಿರುವ ದಿವಂಗತ ಜಿ. ಕೃಷ್ಣರಾಯರ ವ್ಯಾಖ್ಯಾನ ಮಾಲೆಯಲ್ಲಿ ನಡೆದ ಶ್ರೀ ರಂ. ಶ್ರೀ. ಮುಗಳಿ ಯವರ ಭಾಷಣವನ್ನು 'ರನ್ನನ ಕೃತಿರತ್ನ' ಎಂದು ವಿಮರ್ಶಾತ್ಮಕ ಗ್ರಂಥ ರೂಪದಲ್ಲಿ ಪ್ರಕಟಿಸಿತು. ಈಗ "ಹರಿಹರನು ಚಿತ್ರಿಸಿರುವ ಕೆಲವು ಶರಣರು" ಎಂಬ ಈ ಹೊತ್ತಗೆಯನ್ನು ಪ್ರಕಟಿಸಿದೆ. ಈ ಹೊತ್ತಗೆಯನ್ನು ಹೊರಗೆ ಹಾಕುವ ಶಕ್ತಿ ಮತ್ತು ಉತ್ಸಾಹವನ್ನು ತಂದ ಕೊಟ್ಟವರು ಇಬ್ಬರು ಮಹನೀಯರು. ಸಂಘದ ಪತ್ರಿಕೆಯಾದ "ವಿಜಯ" ದಲ್ಲಿ ಪ್ರಕಟವಾದ ಈ ಚಿತ್ರಗಳನ್ನು ಒಂದೆಡೆ ಸೇರಿಸಿ ಈ ಸಮ್ಮೇಳನದ ಸಮಯದಲ್ಲಿ ಹೊರಗೆಡಹಲು ಅನುಮತಿಯಿತ್ತ, ಇವುಗಳನ್ನು ಬರೆದ ಶ್ರೀ. ತ. ಶ್ರೀಕಂಠಯ್ಯ ಎಂ. ಎ. ಅವರು ಒಬ್ಬರು; ಮತ್ತೊಬ್ಬರು ಯಾದಗಿರಿಯ ಶ್ರೀ ಕೊಂಕಲ ನಾರಾಯಣಪ್ಪನವರು.

ಪ್ರಕಟಣೆಯ ಕೆಲಸ ಸುಲಭವಲ್ಲ ಎಂಬುದು ವಾಚಕರಿಗಿಂತ ಪ್ರಕಾಶಕರಿಗೆ ಹೆಚ್ಚು ಗೊತ್ತು. ಈ ಕಠಿಣ ಕೆಲಸವನ್ನು ಹಗುರ ಮಾಡಿದವರು ಶ್ರೀ ನಾರಾಯಣಪ್ಪನವರು. ಈ ಹೊತ್ತಗೆಯ ವೆಚ್ಚಕ್ಕೆಂದು ಎರಡು ನೂರು ರೂಪಾಯಿಗಳ ಸಹಾಯದ ಆಶ್ವಾಸನವನ್ನು ಅವರು ಇತ್ತು ಸಂಘವನ್ನು ಪ್ರೋತ್ಸಾಹಿಸಿದ್ದರಿಂದಲೇ ಈ ಹೊತ್ತು ಈ ಹೊತ್ತಗೆಯು ವಾಚಕರ ಕೈ ಸೇರಿದೆ. ಶ್ರೀ ನಾರಾಯಣಪ್ಪನವರು ವಿಶಾಲ

ಮತ್ತು ಉದಾರ ಹೃದಯದವರು; ತಮ್ಮನ್ನು ತಾವೇ ಮರೆತು ಜನತೆಯ ಸೇವೆಯನ್ನು ಸಲ್ಲಿಸುವವರು; ಯಾದಗಿರಿಯ ಮುಂದಾಳುಗಳಲ್ಲೊಬ್ಬರೆ ; ಇವರು ನಮ್ಮ ಸಂಘದ ಆಜೀವ ಸದಸ್ಯರು. ಶ್ರೀ ತ. ಶ್ರೀಕಂಠಯ್ಯನವರಿಗೂ ಶ್ರೀ ನಾರಾಯಣಪ್ಪನವರಿಗೂ ಸಂಘವು ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ತಮಗಿರುವ ಮುದ್ರಣಾಲಯದ ಅನೇಕ ಅನನುಕೂಲತೆಗಳಲ್ಲಿಯೂ ಶ್ರಮವಹಿಸಿ, ಹೊತ್ತಿಗೆ ಸರಿಯಾಗಿ ಮುದ್ರಿಸಿಕೊಟ್ಟ ಶ್ರೀ ಬ್ರಹ್ಮ ಭೂಷಣ ಮುದ್ರಣಾಲಯದ ಒಡೆಯರ ಉಪಕಾರವನ್ನು ಇಲ್ಲಿ ಸ್ಮರಿಸದೆ ಇರೆವು ಕನ್ನಡ ಜನರು ಈ ಹೊತ್ತಗೆಯನ್ನು ಹೆಚ್ಚು ಹೆಚ್ಚಾಗಿಕೊಂಡು, ಓದಿ, ಇನ್ನೂ ಹೆಚ್ಚಿನ ಪ್ರಕಟನೆಗಳನ್ನು ಹೊರಡಿಸಲು ಸಂಘಕ್ಕೆ ಶಕ್ತಿ ಮತ್ತು ಪ್ರೋತ್ಸಹ ಕೊಡುವರೆಂದು ಒಗೆದಿದ್ದೇವೆ.

**ಕರ್ನಾಟಕ ಸಂಘ**
**ರಾಯಚೂರು**
ಡಿಸೆಂಬರ್ ೧೯೫೫

**ಆರ್. ವೆಂಕಟಶೆಟ್ಟಿ**
**ರಾ. ಗು. ಜೋಶಿ**
ಕಾರ್ಯದರ್ಶಿಗಳು

# ಅರಿಕೆ.

ಕನ್ನಡ ಸಾಹಿತ್ಯದ ಮಹಾಕವಿಗಳಲ್ಲಿ ಹರಿಹರನ ಹೆಸರೂ ಒಂದು ಮುಖ್ಯವೆಂಬುದನ್ನು ಮರೆಯಲಾಗದು. ಅವನು ರಚಿಸಿರುವ ಗ್ರಂಥಗಳು ಅನೇಕ. ಕನ್ನಡ ಕಾವ್ಯಗಳಲ್ಲಿ ಎಲ್ಲಿಯೋ ಒಂದೊಂದು ಕಡೆ ಬಳಕೆಯಲ್ಲಿದ್ದ ರಗಳೆಯ ಛಂದಸ್ಸನ್ನು ಬಳಸಿ ಇಡೀ ಕಾವ್ಯವನ್ನೇ ರಚಿಸಿದನು ಹರಿಹರ. ಆ ರಗಳೆಯ ಕಾವ್ಯಗಳು ದೊಡ್ಡವಾದರೆ ಅವುಗಳನ್ನು ಸ್ಥಲಗಳಾಗಿ ವಿಭಾಗಿಸಿ ಒಂದನ್ನು ರಗಳೆಯಲ್ಲೂ ಮುಂದಿನದನ್ನು ಗದ್ಯದಲ್ಲೂ ರಚಿಸಿದ್ದಾನೆ. ಇದರಿಂದ ಓದುಗರಿಗೆ ಬೇಸರವಾಗದಿರಲೆಂಬುದೇ ಅವನ ಉದ್ದೇಶವಿದ್ದಿರಬೇಕು. ಇವನು ರಚಿಸಿರುವ ರಗಳೆಗಳು ೧೦೦ಕ್ಕೂ ಹೆಚ್ಚಾಗಿವೆ. ಈ ರಗಳೆಗಳನ್ನೇ ಅಲ್ಲದೆ ಈ ಕವಿ ಗಿರಿಜಾಕಲ್ಯಾಣ ವೆಂಬ ಚಂಪೂ ಗ್ರಂಥವನ್ನೂ, ರಕ್ಷಾಶತಕ, ಪಂಪಾಶತಕ - ನೆಂಬ ಶತಕಗಳನ್ನೂ ರಚಿಸಿದ್ದಾನೆ. ಹರಿಹರ ಕವಿಯು ರಚಿಸಿರುವ ಕೆಲವು ರಗಳೆಗಳನ್ನು ನಾನು ಓದಿ, ಆನಂದಿಸಿ, ಅವುಗಳ ಸವಿಯನ್ನು ಇನ್ನೂ ಕೆಲವರು ಸವಿಯಲೆಂದು ಆಶಿಸಿದೆನು. ಆದ ಕಾರಣ ಆ ರಗಳೆಗಳಲ್ಲಿ ಕೆಲವನ್ನು ಹೊಸಗನ್ನಡದಲ್ಲಿ ಬರೆದು ಕನ್ನಡಿಗರ ಮುಂದೆ ಇಟ್ಟಿರುವೆನು. ಸಾಧ್ಯವಾದರೆ, ಇನ್ನೂ ಕೆಲವನ್ನು ಇಂತೆಯೇ ಹೊಸಗನ್ನಡ ಗದ್ಯಕ್ಕೆ ತರಬೇಕೆಂಬ ಹಂಬಲವಿದೆ. ಅದು "ಹರಿಹರನು ಚಿತ್ರಿಸಿರುವ ಕೆಲವು ಶರಣರು" ಭಾಗ ೨ ಆಗಬಹುದು.

ಈಗ ವಾಚಕರ ಕೈಯಲ್ಲಿಡುತ್ತಿರುವ ಹೊತ್ತಗೆಯಲ್ಲಿ ಕಂಡು ಬರುವ ೮ ಕಥಾಚಿತ್ರಗಳನ್ನು ಈಗ್ಗೆ ಐದುವರ್ಷಗಳ ಕೆಳಗೆ ಬರೆದೆನು; ಕಾರಣಾಂತರಗಳಿಂದ ಈ ವರೆಗೆ ಪ್ರಕಟ ಪಡಿಸಲಿಲ್ಲ. ಇದರಲ್ಲಿ ಮೊದಲನೆಯ ಏಳು ಕಥೆಗಳು "ವಿಜಯ" ಮಾಸಪತ್ರಿಯಲ್ಲಿ ಪ್ರಕಟವಾಗಿ ಮೇಲಚ್ಚು ಪಡೆದವು. ಎಂಟನೆಯ ಕಥೆ ಮಾತ್ರ ಮೊದಲನೆಯ ಬಾರಿ ಬೆಳಕನ್ನು ಕಾಣುತ್ತಿದೆ. ಈ ಸಂದರ್ಭದಲ್ಲಿ, ಏಳು ಕಥೆಗಳನ್ನು

"ವಿಜಯ" ಪತ್ರಿಕೆಯಲ್ಲಿ ಪ್ರಕಟಿಸಿ, ಮೇಲಚ್ಚು ಪಡೆದದ್ದಕ್ಕೂ, ಎಂಟ ನೆಯ ಕಥೆಯನ್ನೂ ಅಚ್ಚು ಹಾಕಿಸಿ, ಒಟ್ಟು ಎಂಟು ಕಥೆಗಳನ್ನೂ ಪುಸ್ತಕ ರೂಪದಲ್ಲಿ ಪ್ರಕಟಿಸಲು ನೆರವಾದ "ವಿಜಯ" ಪತ್ರಿಕೆಯ ಸಂಪಾದಕರಿಗೂ, ಪ್ರಕಟಿಸಿದ ರಾಯಚೂರು ಕರ್ನಾಟಕ ಸಂಘದ ಕಾರ್ಯನಿರ್ವಾಹಕರಿಗೂ ನನ್ನ ಕೃತಜ್ಞತೆಯ ವಂದನೆಗಳು.

ಇದು ನನ್ನ ಎರಡನೆಯ ಗ್ರಂಥ; ಮೊದಲನೆಯದು "ಅರಿವು" ಎಂಬ ಕವನ ಸಂಗ್ರಹ. ಈ ಗದ್ಯಗ್ರಂಥ, ಐದುವರ್ಷಗಳ ಹಿಂದೆ ರಚಿತವಾದುದು ಬೇರೆ. ಅಂತೆಯೆ ಇದರಲ್ಲಿಯೂ ನನ್ನ ಶೈಲಿಯಾಗಲಿ ವಿಷಯ ನಿರೂಪಣೆಯ ಕ್ರಮವಾಗಲಿ ಉತ್ತಮವಾದುದೆಂದು ನಾನೇ ಹೇಳಲಾರೆ. ಮಹಾಕವಿಯ ಅನುವಾದವೆಂಬುದೇ ಮನಸ್ಸಿನ ಸಮಾಧಾನ. ಶ್ರೀ. ಹಳಕಟ್ಟಿಯವರು ಸಂಪಾದಿಸಿರುವ "ಹರಿಹರನ ರಗಳೆಗಳು" ಎಂಬುವು ಈ ನನ್ನ ಪುಸ್ತಕಕ್ಕೆ ಮೂಲ. ಇಷ್ಟು ಹೇಳಿ, ಕನ್ನಡಿಗರ ಸೌಹಾರ್ದವನ್ನು ಬಯಸಿ, ನನ್ನ ಅರಿಕೆಯನ್ನು ಮುಗಿಸುತ್ತೇನೆ.

ರಾಯಚೂರು<br>೨೫-೦೨-೧೯೫೫

ಇತಿ "ಕನ್ನಡ ಕುವರ"<br>ತ. ಶ್ರೀಕಂಠಯ್ಯ

## ೧. ಅತಿ ಭಕ್ತ.

ಪವಿತ್ರನದಿಯಾದ ಕಾವೇರಿಯಬೈಲು, ಆ ಬೈಲಿನಲ್ಲಿ ವಿಧವಿಧವಾದ ಬೆಳೆಗಳು, ಸೊಂಪಾಗಿ ಬೆಳೆದ ಬಾಳೆಯ ತೋಟ, ರಸದಾಳಿಯ ಕಬ್ಬಿನತೋಟ, ಹೂವಿನ ತೋಟ, ಇವುಗಳು ಕಣ್ಮನಗಳಿಗೆ ಆನಂದವನ್ನೀಯುತ್ತಿವೆ. ಎಲ್ಲಿ ನೋಡಿದರೂ ಶಿವಾಲಯಗಳು ಕಂಗೊಳಿಸುತ್ತಿವೆ, ಶ್ರೀಮಂತರ ದಿವ್ಯಭವನಗಳು ಎದ್ದು ಕಾಣುತ್ತಿವೆ. ಇದು ಚೋಳರಾಜನ ದೇಶ; ಆ ರಾಜನು ಶಿವಭಕ್ತ, ಸೂರ್ಯವಂಶದಲ್ಲಿ ಹುಟ್ಟಿದವನು.

ಆ ದೇಶದಲ್ಲಿ ಒಂದು ಪಟ್ಟಣ, ಅದರ ತುಂಬ ಸುಜ್ಞಾನಿಗಳು, ಮಣಿಗಳನಡುವೆ ಚಿಂತಾಮಣಿ ಯಂತೆಯೂ, ಕಣಿಗಳ ನಡುವೆ ಸ್ಪರ್ಶಶಿಲೆಯ ಕಣಿಯಂತೆಯೂ, ಮರಗಳ ನಡುವೆ ಕಲ್ಪವೃಕ್ಷದಂತೆಯೂ, ಬೆಟ್ಟಗಳ ನಡುವೆ ಮೇರುವಿನಂತೆಯೂ, ಆ ಪಟ್ಟಣ ಶ್ರೇಷ್ಠವಾಗಿತ್ತು. ಅಲ್ಲಿ ಹೇಳಲಾರದಷ್ಟು ಮಾನವರತ್ನಗಳಿದ್ದುವು. ಯಾವ ಮನುಷ್ಯ ಏನು ಬೇಡಿ ಬಂದರೂ ಆ ಪಟ್ಟಣದಲ್ಲಿ ದೊರಕುತ್ತಿತ್ತು. ಅಲ್ಲಿನ ಇಂಪು ಸೊಂಪುಗಳ ಮೇರೆಯನ್ನು ಯಾರೂ ಅರಿಯರು. ಲಕ್ಷ್ಮೀದೇವಿಗೆ ತವರು ಮನೆಯಂತಿದ್ದ ಆಪಟ್ಟಣ ಹದಿನೆಂಟು ದೇಶಗಳ ವೈಭವವನ್ನು ತನ್ನಲ್ಲಿಯೇ ಮೆರೆದು, ಭೂದೇವಿಗೆ ಒಂದು ಕನ್ನಡಿಯಂತೆ ಇತ್ತು

ಆ ಪಟ್ಟಣದ ಸಮೀಪದಲ್ಲಿ ಒಂದು ಹೊಳೆ, ಆ ಹೊಳೆಯ ದಡದಲ್ಲಿ ಒಂದು ಬೆಸ್ತರ ಹಳ್ಳಿ ಆ ಹಳ್ಳಿಯ ಬೆಸ್ತರು ಆ ಹೊಳೆಯಲ್ಲಿ ಸಿಕ್ಕುವ ಮೀನುಗಳನ್ನು ಹಿಡಿದು, ಮಾರಿ, ಜೀವಿಸುತ್ತಿದ್ದರು. ಮೀನಿನ ಮಾರುಕಟ್ಟೆಯಲ್ಲಿ ಅವರು ಸಂಪಾದಿಸುತ್ತಿದ್ದ ಹೊನ್ನು ದಿನದಿನವೂ ಹೆಚ್ಚುತ್ತಿತ್ತು. ದೊಡ್ಡ ದೊಡ್ಡ ಮೀನುಗಳು ಅವರ ಬಲೆಗೆ ಸಿಕ್ಕಿ, ಅವರ ಕೈಗೆ ಬರಲು, ಅವುಗಳನ್ನ ಹೆಚ್ಚು ಹೆಚ್ಚು ಬೆಲೆಗೆ ಮಾರುತ್ತಿದ್ದರು.

ಆ ಬೆಸ್ತರ ನಡುವೆ ಒಬ್ಬ ಶಿವಭಕ್ತನಿದ್ದನು. ಅವನ ಹೆಸರು ಅತಿಭಕ್ತ. ಆ ಅತಿಭಕ್ತನು ಭೂಮಿಯಲ್ಲಿ ಅಡಗಿರುವ ನಿಧಿಯಂತೆಯೂ, ತಾ

ಮಸಗುಣದಿಂದ ಮುಚ್ಚಲ್ಪಟ್ಟಿರುವ ಸತ್ಯದಂತೆಯೂ, ಇದ್ದನು. ಅವನು ತನ್ನ ಜಾತಿಯವ ರೊಂದಿಗೆ ಪ್ರತಿದಿನವೂ ಹೊಳೆಗೆ ಹೋಗಿ, ಮೀನುಗಳನ್ನು ತಂದು, ಮಾರಿ, ಆ ಹಣದಿಂದ ಶಿವಭಕ್ತರನ್ನು ತೃಪ್ತಿಪಡಿಸಿ, ಶಿವಪೂಜೆ ಮಾಡುತ್ತ, ಕಾಲಕಳೆಯುತ್ತಿದ್ದನು. ಮೀನು ಹಿಡಿಯುವುದರಲ್ಲಿ ಅತಿ ಭಕ್ತನದು. ಒಂದು ವ್ರತ – ಮೊದಲು ಸಿಕ್ಕುವ ಮೀನನ್ನು, ಅದು ರತ್ನದ್ದೇ ಆದರೂ ಸರಿ, ಈಶ್ವರನಿಗೆ ಅರ್ಪಿತವೆಂದು ಬಿಡುತ್ತಿದ್ದನು. ಅನಂತರ ಎರಡನೆಯ ಮೀನು ಸಿಕ್ಕದಿದ್ದರೆ ಹಾಗೆಯೇ ಮನೆಗೆ ಹೋಗುತ್ತಿದ್ದನು.

ಹೀಗಿರುತ್ತಿರಲು ಒಂದುಸಾರೆ ಕೆಲವು ದಿನಗಳು ಇವನಿಗೆ ಎರಡನೆಯ ಮೀನೇ ಸಿಕ್ಕಲಿಲ್ಲ ಒಂದುದಿನ ಒಂದು ದೊಡ್ಡ ಮೀನು ಸಿಕ್ಕಲು, ಅದನ್ನು ಈಶ್ವರಾರ್ಪಣವೆಂದು ಬಿಟ್ಟು ಬಿಟ್ಟನು. ಮತ್ತೆ ಮೀನು ಸಿಕ್ಕಲಿಲ್ಲ, ಹೀಗಾಗಿ ಅತಿ ಭಕ್ತನು ಸಂಪಾದಿಸಿದ್ದ ಹಣವೆಲ್ಲ ಕರಗಿತು; ಹೆಂಡತಿ ಮಕ್ಕಳು ಉಪವಾಸ ಮಾಡಬೇಕಾಗಿ ಬಂತು; ಆದರೂ ಅವನು ತನ್ನ ವ್ರತವನ್ನು ಬಿಡಲೊಲ್ಲ. ಭಕ್ತರು ಇಷ್ಟಕ್ಕೆಲ್ಲ ಹೆದರುವರೆ!

ಕೆಲವುದಿನಗಳು ಕಳೆದುವು ಈಶ್ವರನು ತನ್ನ ಭಕ್ತನನ್ನು ಪರೀಕ್ಷಿಸ ಬೇಕೆಂದು ನಿರ್ಧರಿಸಿದನು. ಅತಿಭಕ್ತನು ಮನಸ್ಸಿನಲ್ಲಿ ಶಿವನನ್ನು ಧ್ಯಾನಿಸುತ್ತ, ಹೊಳೆಯಲ್ಲಿ ಬಲೆಯನ್ನು ಬೀಸಿದನು. ಆಗ ಈಶ್ವರನು ನವರತ್ನ ನಿರ್ಮಿತ ವಾದ ಒಂದು ಭಾರಿಯ ಮೀನನ್ನು ಅದರಲ್ಲಿ ಕೆಡವಿದನು. ಅದನ್ನು ತಾನೊಬ್ಬನೇ ತೆಗೆಯಲಾಗದೆ, ತನ್ನ ಜೊತೆಯ ಹಲ ಕೆಲರ ಸಹಾಯದಿಂದ ಮೇಲಕ್ಕೆ ತೆಗೆದನು. ಅದರ ವೈಭವಕಾಂತಿ ಯಿಂದ ಆ ಪ್ರದೇಶವೆಲ್ಲ ಬೆಳಗುತ್ತಿತ್ತು. ಎಲ್ಲರೂ ಅದನ್ನು ನೋಡುತ್ತ, ಬೆರಗಾಗಿದ್ದರು. ಅತಿಭಕ್ತನು ಈಶ್ವರಾರ್ಪಣವೆಂದು ಅದನ್ನು ನೀರಿನಲ್ಲಿ ಬಿಟ್ಟನು. ಉಳಿದವರು ಅಂತಹ ಮೀನನ್ನು ನೀರಿಗೆ ಬಿಟ್ಟವರುಂಟೆ ಎಂದುಚಿಂತಿಸುತ್ತಿದ್ದರು. ಆಗ ಆ ಭಕ್ತನು ಯಾವ ವಿಧವಾದ ಆಶೆಯನ್ನೂ ಮಾಡದೆ, ತನ್ನ ವ್ರತದಂತೆ ಎರಡನೆಯಬಾರಿ ಬಲೆಯನ್ನು ಬೀಸಿದನು. ಮತ್ತೆ

ಅದೇ ಹೊಳಪಿನ ಮೀನು ಬಂದಿತು. "ನಾನು ಇದನ್ನು ಶಿವಪ್ರಿಯ ವೆಂದೇ ಬಿಟ್ಟೆನು, ಇದನ್ನು ನಾನೊಲ್ಲೆನು" ಎಂದು ಹೇಳಿ ಅದುನ್ನು ಬಿಟ್ಟು, ಹೊಳೆಯ ಬೇರೊಂದು ಪ್ರದೇಶಕ್ಕೆ ಹೋದನು. ಅಲ್ಲಿಯೂ ಅದೇ ಹೊಂಬಣ್ಣದ ಮೀನು ಬಂದಿತು. ಆಗಲೂ ಅದನ್ನು ಬಿಟ್ಟನು. ಅವನು ಎಷ್ಟುಬಾರಿ ಬಲೆ ಬೀಸಿದರೂ ಅದೇ ಮೀನೇ ಬರುತ್ತಿತ್ತು; ಅದನ್ನು ಹಿಂದಕ್ಕೆ ನೀರಿಗೇ ಬಿಡುತ್ತಿದ್ದನು. ಆದಿನ ಸಂಜೆಯ ವರೆಗೂ ಹೀಗೆಯೇ ನಡೆಯಿತು.

ಮರುದಿನ ಅತಿಭಕ್ತನು ಹೊಳೆಗೆ ಬಂದು ಬಲೆಬೀಸಲು, ಮತ್ತೆ ಅದೇ ಹೊಳಪಿನ ಮೀನು ಬಂದಿತು. ಆದರಿಂದ ಆಶ್ಚರ್ಯಪಟ್ಟ ಆ ಭಕ್ತನು "ಇನ್ನೊಮ್ಮೆ ಬಲೆಬೀಸುತ್ತೇನೆ. ಅದೇ ಮತ್ಸ್ಯವೇ ಬಂದಿತಾದರೆ, ಇನ್ನುಮುಂದೆ ಬಲೆಯನ್ನೆ ಬೀಸದಂತೆ ನನ್ನಕೈಯನ್ನು ಕತ್ತರಿಸಿಕೊಳ್ಳುತ್ತೇನೆ" ಎಂದು ಪ್ರತಿಜ್ಞೆ ತೊಟ್ಟನು.

ಅಂತೆಯೇ ಬಲೆಯನ್ನು ನೀರಿಗೆ ಬೀಸಿ, ತೆಗೆಯಲು ಅದರಲ್ಲಿ ಈಶ್ವರನೇ ಸಿಕ್ಕಿಬಿದ್ದಿದ್ದಾನೆ, ಪಂಚಮುಖ, ದಶಭುಜ, ಫಣಿಕುಂಡಲಗಳಿಂದ ಮೆರೆಯುತ್ತಿದ್ದಾನೆ. ವೃಷಭ ಗಿರಿಜೆ ಯರೊಂದಿಗೆ ಪ್ರಕಾಶಿಸುತ್ತಿದ್ದಾನೆ. ಅತಿಭಕ್ತನ ಭಕ್ತಿಯು ಬಲೆಗೆ ಸಿಕ್ಕಿ ತನ್ನ ನಿಜರೂಪದಲ್ಲಿ ಪ್ರಕಟಿತನಾಗಿದ್ದಾನೆ. ಸುರರು ಹೂಮಳೆಯನ್ನು ಸುರಿಸಿದ್ದಾರೆ. ದೇವದುಂದುಭಿಗಳು ಧ್ವನಿಗೆಯ್ಯುತ್ತಿವೆ. ಪರಮಋಷಿಗಳು ಬಂದಿದ್ದಾರೆ.

ಅತಿಭಕ್ತನು ಪರಶಿವನನ್ನು ಕಂಡು, ಬಾಯಾರೆ ಸ್ತುತಿಸಿ, ನಮಸ್ಕರಿಸಿ ಪಕ್ಕದಲ್ಲಿ ನಿಂತನು. ಈಶ್ವರನು ಸಂತಸವನ್ನ ಬೀರುತ್ತಿದ್ದನು. ಥಳಥಳಿಸುವ ಒಂದು ದಿವ್ಯ ವಿಮಾನವು ಬಂತು. ಪರಶಿವನು ತನ್ನ ಭಕ್ತನನ್ನು ಅದರಲ್ಲಿ ಕೂಡಿಸಿ ಕೊಂಡು, ಕೈಲಾಸವನ್ನು ಸೇರಿದನು; ನಂದಿಯೊಡನೆಯೂ ಇತರ ಶಿವಗಣಗಳೊಡನೆಯೂ ಅತಿಭಕ್ತನ ದೃಢವ್ರತವನ್ನೂ ನಿಷ್ಠೆಯನ್ನೂ ಹೊಗಳಿ, ತಿಳಿಸಿ, ಅತಿಭಕ್ತನಿಗೆ ಗಣಪದವನ್ನು ಕೊಟ್ಟು ಕಾಪಾಡಿದನು.

— * —

## ೨. ಚಂಡೇಶ ಪಿಳ್ಳೆ.

ಚೋಳ ದೇಶದಲ್ಲಿ ನಲ್ಲೂರು ಎಂಬು ದೊಂದು ಗ್ರಾಮ; ಅಲ್ಲಿ ಅಚ್ಯುತ ಭಟ್ಟನೆಂಬ ಒಬ್ಬ ಬ್ರಾಹ್ಮಣ; ಅವನು ಸಕಲ ಶಾಸ್ತ್ರ ಕೋವಿದ; ಅವನ ಹೆಂಡತಿಯ ಹೆಸರು ಸಾವಿತ್ರಿ, ಐಶ್ವರ್ಯದಲ್ಲಿ ಅವನಿಗೆ ಸರಿಯಾದವರು ಯಾರೂ ಆ ಗ್ರಾಮದಲ್ಲಿರಲಿಲ್ಲ. ಅವನಿಗೆ ಪ್ರಿಯಬಂಧುಗಳ ಕೊರತೆಯೂ ಇರಲಿಲ್ಲ. ಆದರೆ ಅವನಿಗೆ ಪುತ್ರ ನಿಲ್ಲವೆಂಬುದೊಂದೇ ಕೊರತೆ. ಆ ಒಂದು ಚಿಂತೆ ಬಹಳವಾಗಿ ಮನಸ್ಸನ್ನು ಬಾಧಿಸುತ್ತಿತ್ತು.

ಆ ಊರಿನಲ್ಲಿ ಚಂಡೇಶ ಪಿಳ್ಳೆ ಯೆಂಬ ಹೆಸರಿನ ವಿನಾಯಕನಿದ್ದನು; ಆ ದೇವರು ಯಾರು ಏನನ್ನೂ ಬಯಸಿದರೂ ಕೊಡುತ್ತಿದ್ದನು. ಭೂಚರರೇ ಅಲ್ಲದೆ ಖೇಚರರು, ಗರುಡರು, ಗಂಧರ್ವರು, ಸುರರು, ಅಸುರರು, ಕಿನ್ನರರು, ಪನ್ನಗರು, ಸಿದ್ಧರು ಮೊದಲಾದವರೆಲ್ಲರೂ ಆ ಚಂಡಪಿಳ್ಳೆಯನ್ನು ಭಜಿಸಿ, ಪೂಜಿಸಿ ತಮ್ಮ ಇಷ್ಟಾರ್ಥವನ್ನು ಪಡೆಯುತ್ತಿದ್ದರು. ಆ ಚಂಡ ಪಿಳ್ಳೆಯು ನಾನಾಲಂಕಾರ ಗಳಿಂದ ಒಪ್ಪಿ ಮೆರೆಯುತ್ತಿದ್ದನು. ಅಚ್ಯುತಭಟ್ಟನು ಆ ವಿನಾಯಕ ನಲ್ಲಿಗೆ ಭಕ್ತಿ ಭರದಿಂದ ನಮ್ರನಾಗಿ ಬಂದು, ಸಂತೋಷದಿಂದ ಪೂಜಿಸಲು ಆ ದೇವನು ಪ್ರತ್ಯಕ್ಷನಾಗಿ "ಎಲೆ ವಿಪ್ರ, ನಿನಗೊಬ್ಬ ಮಗನನ್ನು ಕೊಟ್ಟೆನು" ಎಂದು ಹೇಳಿ ಮಾಯವಾದನು. ಆಗ ಆ ಬ್ರಾಹ್ಮಣನು ಕುರುಡನಿಗೆ ಕಣ್ಣು ಬಂದಂತಾಗಿ ತನ್ನ ಮನೆಗೆ ಹೋಗಿ, ಹೇಳಿ, ಹಿಗ್ಗಿ ನಲಿದಾಡಿದನು.

ಕಾಲಕ್ರಮದಲ್ಲಿ ಸಾವಿತ್ರಿಗೆ ಗರ್ಭ ಮೂಡಿತು; ಮುಖದಲ್ಲಿ ಕಾಂತಿ ಮಿನುಗಿತು; ಒಂದೆರಡು ತಿಂಗಳು ಕಳೆಯಿತು; ನವಮಾಸವೂ ತುಂಬಿ ಕಂದನನ್ನೂ ಪಡೆದಳು. ಮಗುವಿಗೆ ಜಾತ ಕರ್ಮ ನಾಮಕರಣ ಮಹೋತ್ಸವ ನಡೆಯಿತು. ವಿನಾಯಕನ ಹೆಸರಾದ ಚಂಡೇಶ ಪಿಳ್ಳೆಯೆಂದೇ ಹೆಸರಿಟ್ಟರು ಮಗುವಿಗೆ.

ತಂದೆ ತಾಯಿಗಳ ಸಂತೋಷಕ್ಕೆ ಪಾರವಿಲ್ಲ. ಮಗು ಬಹಳ

ಸುಖವಾಗಿ ಬೆಳೆಯ ತೊಡಗಿತು. ಮಗು ಬೆಳೆದ ಹಾಗೆಲ್ಲ ಆ ಬ್ರಾಹ್ಮಣನಿಗೆ ಬಡತನವೂ ಬೆಳೆಯ ತೊಡಗಿತು. ಹೊಳೆವ ಮಾಯೆ.ಗೆ ಭಕ್ತಿ ಸೊಗಸದಲ್ಲವೆ! ಇಂದ್ರಿಯ ಸುಖಕ್ಕೂ ಶಿವಭಕ್ತಿಗೂ ದೂರವಲ್ಲವೆ! ಚಂದಿರನಿಗೂ ಕತ್ತಲೆಗೂ ಸೇರದಲ್ಲವೆ! ಅಚ್ಯುತ ಭಟ್ಟನ ಐಶ್ವರ್ಯ ಎಲ್ಲಿದ್ದದ್ದು ಅಲ್ಲಿಯೇ ಮಾಯವಾಗಲಾರಂಭಿಸಿತು ಇದನ್ನು ಕಂಡ ಪುರಜನರು ಅಚ್ಯುತ ಭಟ್ಟನನ್ನು ನೋಡಿ "ಇದೇನು ಭಟ್ಟರೇ, ಎಂಥ ಮಗನನ್ನು ಪಡೆದಿರಿ? ಇವನು ಯಾವ ಮುಹೂರ್ತದಲ್ಲಿ ಹುಟ್ಟಿದನೋ, ನಿಮಗೆ ಈ ಗತಿಯಾಯ್ತಲ್ಲ! ಏನು ಹೇಳೋಣ! ಯಾರಾದರೂ ಸಾಕಿಕೊಳ್ಳುವವರಿಗೆ ಈ ಮಗುವನ್ನು ಕೊಡುವುದು ಒಳಿತು. ಅದರಿಂದ ನಿಮಗೂ ಲೇಸು!! ಎಂದರು.

"ನನಗೆ ಸಕಲೈಶ್ವರ್ಯವೂ ನನ್ನ ಕಂದನೇ, ಬಂಧು ಬಳಗಗಳೂ ನನ್ನ ಕಂದನೇ. ನನ್ನ ಜೀವವೂ ಭಾವವೂ ನನ್ನ ಕಂದನೇ. ಮಗನನ್ನು ಹೆರರಿಗೆ ಕೊಟ್ಟು ಬದುಕುವ ಸಂಪತ್ತು ಏಕೆ? ಮಗನಿದ್ದು ಬಡತನ ವಿದ್ದರೂ ಅದು ಐಶ್ವರ್ಯಕ್ಕೆ ಸರಿ" ಎಂದು ಅಚ್ಯುತ ಭಟ್ಟನು ಹೇಳಿದನು.

ಹಾಗೆ ಹೇಳಿ ಆ ಬ್ರಾಹ್ಮಣನು ಮಗನನ್ನು ಬಿಡದೆ, ಬಡತನವನ್ನು ಅಪ್ಪಿ, ಧೈರ್ಯಗೆಡದೆ ಕಡು ಕಷ್ಟದಿಂದ ಹೊಟ್ಟೆ ಹೊರೆಯುತ್ತಿದ್ದನು. ಮಗನಿಗೆ ಇಪ್ಪತ್ತು ನಾಲ್ಕು ವರ್ಷ ವಯಸ್ಸಾಯಿತು. ಆಗ ಪುರಜನರು ಮತ್ತೆ ಬ್ರಾಹ್ಮಣನನ್ನು ಕುರಿತು "ಅಯ್ಯಾ ಬ್ರಾಹ್ಮಣ, ನಿನ್ನ ಮಗನು ಈಗ ದೊಡ್ಡವನಾದನು. ನಮ್ಮ ಕರುಗಳನ್ನು ಅವನು ಕಾಯಲಿ, ಅದರಿಂದ ದೈವಭಕ್ತಿಗೆ ಕುಂದಿಲ್ಲ. ಒಂದು ಕರುವಿಗೆ ಒಂದು ಬಳ್ಳ ಧಾನ್ಯವನ್ನು ಕೊಡುತ್ತೇವೆ. ಅದರಿಂದ ನಿನ್ನ ಜೀವನ ಜರುಗುತ್ತದೆ" ಎಂದರು. ಅದಕ್ಕೆ ಬ್ರಾಹ್ಮಣನು ಒಪ್ಪಿದನು. ಮಗನನ್ನು ಕರೆದು "ಮಗು, ನೀನು ಕರುಕಾಯುವ ಹೊತ್ತು ಬಂತಲ್ಲ" ಎಂದು ಗೋಳಾಡಿ, ಕರುಗಳನ್ನು ಜೊತೆಮಾಡಿ ಕೊಟ್ಟು ಸ್ವಲ್ಪ ದೂರ ಅವನೊಡನೆ ಹೋಗಿ ಅವ

ನಿಗೆ ಹೀಗೆ ಉಪದೇಶ ಮಾಡಿದನು "ಕರುಗಳನ್ನು ಗಮನದಿಂದ ನೋಡಿಕೋ. ಬಹಳ ದೂರ ಹೋಗಬೇಡ; ನಿನ್ನ ಕೈಯಲ್ಲಿ ಆಗದು; ಅಲ್ಲದೆ ಹುಲಿ ಕರಡಿಗಳೂ ಉಂಟು. ಕ್ಷೇಮವಾಗಿ ಹೋಗಿ ಬಾ. ಅಲಸನಾಗಬೇಡ. ನೀನು ಬರುವ ಹೊತ್ತಿಗೆ ನಾನು ನಿನಗೆ ಎದುರಾಗಿ ಬರುತ್ತೇನೆ." ಇಷ್ಟು ಹೇಳಿ ಮಗನು ಹೋಗುತ್ತಿರುವುದನ್ನು ತಿರುಗಿ ತಿರುಗಿ ನೋಡುತ್ತ ದುಃಖದಿಂದಲೂ ಅವಮಾನದಿಂದಲೂ ಮನೆಗೆ ಬಂದನು. ಅಂದು ಹೊತ್ತು ಬೀಳುವ ಜಾವದಲ್ಲಿ ಚಂಡೇಶಪಿಳ್ಳೆಯು ಕರುಗಳನ್ನೆಲ್ಲ ಹೊಡೆದುಕೊಂಡು ಮನೆಗೆ ಬಂದನು. ಮಗನ ಬುದ್ಧಿವಂತಿಕೆಗೆ ಹರ್ಷಗೊಂಡ ಬ್ರಾಹ್ಮಣನು ಬಡ ತನಕ್ಕೆ ಅಂಜೆನೆಂದು ಕೊಂಡನು.

ಕೆಲವುದಿನ ಕಳೆಯಿತು. ಚಂಡೇಶ ಪಿಳ್ಳೆಯು ಹಸುಗಳು ಮೇಯುವ ಹುಲ್ಲುಗಾವಲನ್ನೂ ಪರಿಚಯ ಮಾಡಿಕೊಂಡನು; ತನ್ನ ತಂದೆಯನ್ನು ಕುರಿತು "ಕರುಗಳನ್ನು ಕಾಯುವುದೇನು ಕಷ್ಟ! ಹಸುಗಳನ್ನೂ ಕಾಯಬಲ್ಲೆ" ಎಂದನು. ಆಗ ತಂದೆಗೆ ಆದ ಆನಂದಕ್ಕೆ ಪಾರವಿಲ್ಲ. ಮೆಲ್ಲ ಮೆಲ್ಲನೆ ನೂರು ಹಸುಗಳನ್ನು ಕೂಡಿಸಿದನು. ಹಸು ವೊಂದಕ್ಕೆ ಒಂದು ಕೊಳಗದಂತೆ ಧಾನ್ಯವು ಸಿಕ್ಕಿತು; ಮಗನಿಂದ ತನ್ನ ಬಡತನ ಓಡಿತೆಂದು ಹಿಗ್ಗಿದನು.

ಒಂದು ದಿನ ಚಂಡೇಶ ಪಿಳ್ಳೆಯ ಬಲಗಣ್ಣು ಅದುರಿತು. ಆಕಾಶದಲ್ಲಿ ಬೆಳಕು ಬೆಳಗಿತು; ಒಬ್ಬ ಮಾಹೇಶ್ವರನು ಭೂಮಿಗೆ ಇಳಿತಂದನು. ಚಂಡೇಶ ಪಿಳ್ಳೆಯ ತಲೆಯಮೆಲೆ ಕೈಯಿಟ್ಟು ಪಂಚಾಕ್ಷರಿಯ ಮಂತ್ರವನ್ನು ಉಪದೇಶಿಸಿ "ಮಗನೆ, ಇದನ್ನು ಯಾರಿಗೂ ತೋರದಿರು, ಬೀರದಿರು; ಶಿವನಿಂದೆಯನ್ನು ಕಾಣದಿರು, ಕೇಳದಿರು;" ಎಂದು ಬೋಧಿಸಿದನು. ಚಂಡೇಶಪಿಳ್ಳೆ ಅದಕ್ಕೆ "ದೇವ, ತಾಯಿತಂದೆ ಮೊದಲಾಗಿ ಯಾರಲ್ಲಿಯೂ ಇದನ್ನು ಹೇಳೆನು. ನಿಮ್ಮ ಆಜ್ಞೆಯೇ ನನಗೆ ಕಣ್ಣು, ಗತಿ" ಎಂದು ಉತ್ತರ ಕೊಡಲು ಆ ಮಾಹೇಶ್ವರನು ಮರಳಿನಲ್ಲಿ ಒಂದು ಲಿಂಗವನ್ನು

ಮಾಡಿ ತೋರಿ, ಅದನ್ನು ಪೂಜಿಸುವ ಪರಿಯನ್ನು ಹೇಳಿ, ಮಾಯವಾದನು.

ಬಾಲಕನ ಮಾಯೆ (ಅಜ್ಞಾನ) ಕಳೆಯಲು ಮೊದಲಾಯಿತು, ಜಾತಿನೀತಿಗಳು ಅಳಿಸಿಹೋದುವು, ಮನಸ್ಸಿನಲ್ಲಿ ಕೃತಕೃತ್ಯಭಾವ ಮೂಡಿತು, ಮೊಗದಲ್ಲಿ ಆ ಕಳೆ ಕಾಣಿಸ ತೊಡಗಿತು, ಹಸುಗಳೆಲ್ಲವೂ ಸಂತೋಷದಿಂದ ಪಟ್ಟಣಕ್ಕೆ ಬಂದು ಎಂದಿಗಿಂತ ಎರಡರಷ್ಟು ಹಾಲನ್ನು ಕರೆದುವು. ಪುರ ಜನರು ಸಂತೋಷದಿಂದ ಭಟ್ಟರಿಗೆ ಉಡುಗೊರೆ ನೀಡಿದರು.

ಮಾರನೆಯ ದಿನ ಪ್ರಾತ:ಕಾಲ ಎದ್ದು ಎಂದಿನಂತೆ ದನಗಳನ್ನು ಹೊಡೆದುಕೊಂಡು ಹುಲ್ಲು ಗಾವಲಿಗೆ ಹೋಗಿ, ಮೇಯಲುಬಿಟ್ಟು ಚಂಡೇಶಪಿಳ್ಳೆ ತನಗೆ ದೇವರೇಕೊಟ್ಟ ಶಿವಮಂತ್ರವನ್ನು ನೆನಪುಮಾಡಿಕೊಂಡನು. ಆ ಮಂತ್ರವನ್ನು ಕೊಟ್ಟ ಗುರುವನ್ನು ನೆನೆದು ಅವನ ಕರುಣೆಯನ್ನು ಕೊಂಡಾಡಿದನು; ಅವನ ಗುಣಗಣವನ್ನು ಹಾಡಿದನು. ಹೀಗೆ ಸಂತೋಷದಿಂದ ಉಬ್ಬಿ, ಹಿಂದಿನ ದಿನ ಶಿವಪೂಜೆಗೈದ ಸ್ಥಳಕ್ಕೆ ಬಂದನು; ಮರಳಿನಿಂದ ಲಿಂಗವನ್ನು ಮಾಡಿದನು; ಸಿಂಗರಿಸಿದನು; ಆನಂದಾಶ್ರುವನ್ನು ಸುರಿಸಿದನು; ರೋಮಾಂಚಹೊಂದಿ ಆನಂದದಿಂದ ಕುಣಿದಾಡಿದನು; ತರತರದಹೂವನ್ನು ತಂದು ಪೂಜಿಸಿದನು; ಹಾಗೆ ಪೂಜಿಸುತ್ತ ಮೈಮರೆವನು, ಮೈತಿಳಿವನು, ಕೈಯೆತ್ತಿ ಕೂಗುವನು, ಮೈಯಿಕ್ಕಿ ಹಿಗ್ಗುವನು. ಕರು ಗಿರಿವನಗಳನ್ನೂ ಗಿಳಿ, ಹಂಸೆ, ಕೋಕಿಲಗಳನ್ನು ಸಂಬೋಧಿಸಿ ತನ್ನ ಪೂಜೆಯನ್ನು ಶಿವನು ಸ್ವೀಕರಿಸುತ್ತಿರುವನೆಂಬ ಪುಣ್ಯವನ್ನು ಹೇಳಿಕೊಂಡು ಸುಖಪಡುವನು. ಇದು ಅವನ ಪೂಜಾಕ್ರಮ, ಅಷ್ಟರಲ್ಲಿ ತನ್ನ ಕೊಳಲಿನಿಂದ ಗೋವುಗಳನ್ನು ಕರೆದನು ಚಂಡೇಶಪಿಳ್ಳೆ. ಹಸುಗಳೆಲ್ಲವೂ ಬಾಲನನ್ನೆತ್ತಿಕೊಂಡು ಓಡಿಬಂದವು: ಅಕ್ಕರದಿಂದ ಅವನ ಮೈ ನೆಕ್ಕಿದುವು; ಶಿವಲಿಂಗದ ಮೇಲೆ ನಿಂತು, ಮೈಸಡಲಿಸಿ ಲಿಂಗದಮೇಲೆ ಹಾಲುಕರೆದವು. ಹಸುಗಳು ತಮ್ಮ ನಾಲ್ಕು ಮೊಲೆಗಳಿಂದ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ

ಪುರುಷಾರ್ಥಗಳನ್ನು ಸುರಿಸುವಂತೆ ಹಾಲನ್ನು ಸುರಿಸಿದುವು. ಅದನ್ನು ನೋಡಿದರೆ ಅಖಂಡ ಪುಣ್ಯರಾಶಿಯೇ ಲಿಂಗವನ್ನು ಓಲೈಸುತ್ತಿದ್ದಂತೆಯೂ, ಶಿವನ ಜಟೆದ ಶಶಿಯ ಚಂದ್ರಿಕೆಯೇ ಇಳಿದು ಬಂದಂತೆಯೂ ನಯನ ಮನೋಹರ ವಾಗಿದ್ದಿತು. ಶಿವಲಿಂಗವನ್ನು ಒಮ್ಮೆಯೂ ಹಸುವಿಂಡನ್ನು ಒಮ್ಮೆಯೂ ನೋಡಿ ಚಂಡೇಶ ಪಿಳ್ಳೆಯು ಭಕ್ತಿ ರಸದಲ್ಲಿ ತೇಲಾಡುತ್ತಿದ್ದನು.

ಸಾಯಂಕಾಲ ವಾಯಿತು, ಹಸುಗಳನ್ನು ಹೊಡೆದುಕೊಂಡು ಮನೆಗೆ ಬಂದನು, ಅವರವರ ಮನೆಗೆ ಹಸುಗಳು ಹೋದುವು. ಆದರೆ ಅವು ಹಾಲನ್ನು ಕರೆಯಲಿಲ್ಲ. ಕೆಲವು ದಿನ ಕಳೆಯಿತು. ಆಗ ಆ ದನಗಳ ಯಜಮಾನರೆಲ್ಲರೂ ಬಂದು ಅಚ್ಯುತ ಭಟ್ಟರಿಗೆ ಹೀಗೆಂದು ಹೇಳಿದರು. “ಇದೇನಾಶ್ಚರ್ಯ ಭಟ್ಟರೇ! ಒಂದು ತೊಟ್ಟು ಹಾಲಿಲ್ಲ, ಒಂದೆರಡುದಿನವಾದರೆ ಸುಮ್ಮ ನಿರಬಹುದು. ನಿಮ್ಮ ಚಂಡಪಿಳ್ಳೆಯ ಕಾವಲು ಅಸಾಧ್ಯ ವಾಗಿದೆ; ಮಕ್ಕಳಿಗೆ ಹಾಲಿಲ್ಲ. ಕರುವಿಗೂ ಇಲ್ಲ. ಹಸುಗಳು ನಮ್ಮವು, ಹಾಲು ಮಾತ್ರ ನಿಮ್ಮದು. ಈ ಪರಿ ಹೊಸತು. ನಿಮ್ಮ ಮಗನ ಕಾವಲು ಸಾಕು”.

ಅಚ್ಯುತಭಟ್ಟರು ಮಗನನ್ನು ಕುರಿತು ಕೋಪದಿಂದ ‘ಎಲೆ ಮಗನೆ, ಇದರಿಂದ ಹಾಗೂ ಹೀಗೂ ನಾವು ಅನ್ನ ಕಾಣುತ್ತಿದ್ದೆವು. ಆದರೆ ಇದೇನು ಹೀಗೆಮಾಡುತ್ತಿದ್ದಿ? ಹಸುಗಳಿಗೆ ಹುಲ್ಲು, ನೀರು ಇವೆ – ಆದರೂ ಹಾಲೇಕಿಲ್ಲ ? ಎಲ್ಲಿಕಾಯುತ್ತಿದ್ದೆ?’ ಎಂದು ಮೊದಲಾಗಿ ಗದರಿಸಿದರೂ ಚಂಡೇಶಪಿಳ್ಳೆಯು ತಾನು ಮಾಹೇಶ್ವರನಿಗೆ ಕೊಟ್ಟ ಮಾತನ್ನು ಪಾಲಿಸಿದನು. ಅಚ್ಯುತಭಟ್ಟನು ಎಲ್ಲರಿಗೂ ಕೈಮುಗಿದು ನಿಮ್ಮದೇನೂ ತಪ್ಪಿಲ್ಲ, ಈ ಒಂದು ದಿನಮಾತ್ರ ನನ್ನ ಮಾತನ್ನು ಸಲಿಸಿ. ನಾಳೆಯೂ ಇದೇ ಪಾಡು ಆದರೆ ಇವನ ಕಾವಲನ್ನು ತಪ್ಪಿಸಿ.” ಎಂದು ಸಮಾಧಾನ ಹೇಳಿ ಕಳುಹಿಸಿದನು.

ಬೆಳಗಾಯಿತು; ಎಂದಿನಂತೆ ಚಂಡಪಿಳ್ಳೆಯು ದನಗಳನ್ನು ಕೂಡಿಸಿದನು. ಆಗ ತಂದೆಯು ಮಗನನ್ನು ನೋಡಿ "ಮಗನೆ ಏನೇಂದರೂ ಸುಮ್ಮನಿರುವೆಯಲ್ಲ. ಅದು ನಮ್ಮ ದುರದೃಷ್ಟ. ನೀನೇನು ಮಾಡುವೆ? ನಮ್ಮ ಅನ್ನವನ್ನು ಕಳೆಯಬೇಡ. ಸಾವಧಾನದಿಂದ ದನಗಳನ್ನು ನೋಡಿಕೋ" ಎಂದು ಬುದ್ಧಿಹೇಳಿ ಕಳುಹಿಸಿಕೊಟ್ಟನು. ಅನಂತರ ತಂದೆಯು ಮಗನ ಹಿಂದೆಯೇ ಮರೆಯಾಗಿ ಹೋದನು; ಒಂದು ಮರವನ್ನು ಹತ್ತಿ ಕಾದು ಕುಳಿತನು.

ಎಂದಿನಂತೆ ಚಂಡಪಿಳ್ಳೆಯು ದನಗಳನ್ನೆಲ್ಲ ಹುಲ್ಲು ಗಾವಲಿಗೆ ಹೊಡೆದನ; ತನ್ನ ಪೂಜಾಸ್ಥಳಕ್ಕೆ ಹೋದನು. ಶಿವಮಹಿಮೆಯನ್ನು ಹಾಡುತ್ತ, ಹೊಗಳುತ್ತ, ಮಳಲ ಲಿಂಗವನ್ನು ಮಾಡಿದನು. ಕಾಡ ಹೂಗಳನ್ನು ಬಿಡಿಸಿತಂದು ಭಕ್ತ್ಯತಿಶಯದಿಂದ ಪೂಜಿಸಿದನು. ಚಂಡಪಿಳ್ಳೆ ಕೊಳಲನ್ನು ತೆಗೆದು ಕೊಂಡು ಗೋವುಗಳನ್ನು ಕರೆವ ಧ್ವನಿಮಾಡಿದನು. ಹಸುಗಳು ಮೊಗವೆತ್ತಿಕೊಂಡು ಹಿಂಡು ಹಿಂಡಾಗಿ ಬಂದು ಶಿವಲಿಂಗದಮೇಲೆ ಹಾಲುಕರೆದವು; ಹಾಲು ಹಳ್ಳ ಹರಿಯಿತು. ಭಕ್ತನಿಗೆ ಮನಃಪ್ರೀತಿಯುಂಟಾಯಿತು.

ತಂದೆ ಅಚ್ಯುತಭಟ್ಟನು ಮರದಮೇಲಿನಿಂದಲೇ ಎಲ್ಲವನ್ನೂ ನೋಡಿದನು; ಇಳಿದುಬಂದು ಮಗನ ಕೆಲಸಕ್ಕೆ ನಿಂದಿಸಿದನ; ಅಂತೆಯೇ ಶಿವಲಿಂಗವನ್ನು ಮುಟ್ಟತೊಡಗಿದನು. ಚಂಡೇಶನು ಒಂದು ಕೋಲನ್ನು ಎತ್ತಿಕೊಂಡು ಲಿಂಗವನ್ನು ಮುಟ್ಟಿದ ಶಿವದ್ರೋಹಿ ಯೆಂದು ನಿಂದಿಸಿ, ಕೋಪದಿಂದ ತಂದೆಯನ್ನು ಬೀಳುವಂತೆ ಹೊಡೆದನು. ಹಾಗೆ ಹೊಡೆದು ಲಿಂಗದ ಹತ್ತಿರ ಹೋಗಿ ದೇವನನ್ನು ಭವಿ ಮುಟ್ಟಿದ ಪಾಪಕ್ಕಾಗಿ ಸಂತಯಿಸಿದನು. ಆ ಬ್ರಾಹ್ಮಣನು ಮೆಲ್ಲನೆ ಎಚ್ಚತ್ತು "ಕಂದ, ನೀನೇ ನನ್ನನ್ನು ಹೊಡೆವುದೆ? ಬಾಯಾರಿದ್ದೇನೆ. ನೀರನ್ನೂಡಿಸು.' ಎಂದನು. ಅದರಿಂದ ಮತ್ತಷ್ಟು ಕುಪಿತನಾದ ಮಗನು ತಲೆಕಳಚಿ ಬೀಳುಂತೆ ಹೊಡೆ

ದು ತಂದೆಯನ್ನು ತೀರಿಸಿದನು.

ಅನಂತರ ಹುಡುಗನು ಲಿಂಗದಕಡೆ ತಿರುಗಿದನು. ಲಿಂಗದಲ್ಲಿ ವಿರೂಪಾಕ್ಷನೇ ನಿಂತಿದ್ದನು. ಐದು ಮುಖ; ಹತ್ತು ಭುಜಗಳು; ಹೂ ಮಳೆ ಸುರಿಯಿತು. ದುಂದುಭಿ ಮೊಳಗಿತು. ಕಹಳೆ, ಶಂಖಗಳನಾದ ಹಬ್ಬಿತು. ಶಿವಗಣವು ನೆರೆಯಿತು. ಆಗ ವಿರೂಪಾಕ್ಷನು ನಂದೀಶನನ್ನು ಕುರಿತ "ನೋಡಯ್ಯಾ, ಈ ಏಕನಿಷ್ಠನನ್ನು ನೋಡು. ಇವನು ಬ್ರಹ್ಮ ವಿಷ್ಣುಗಳಿಗಿಂತಲೂ ಶ್ರೇಷ್ಠ ತನ್ನ ತಂದೆಯನ್ನೇ ಕೊಂದ ನಿಷ್ಠರು ಮತ್ತಾರಿರುವರು? ನನ್ನ ಭಕ್ತರಿಗೆ ಬೇರೆ ತಾಯಿ ತಂದೆಗಳೆಲ್ಲಿ. ಅಂತೆಯೇ ನನ್ನ ಭಕ್ತರೆ ನನ್ನ ಬಂಧು ಬಳಗ; ಭಕ್ತರೇ ನನಗೆ ಸತಿಸುತರು ಎಂದು ಹೇಳಿ ತನ್ನ ಗಣ ವೃಂದಕ್ಕೆ ಅವನನ್ನು ತೋರಿ ಹೋಗಳಿದನು.

ಹಾಗೆಯೇ ಚಂಡೇಶನನ್ನು ಕುರಿತು "ನಿನಗೆ ನಾನೇ ತಾಯಿ ತಂದೆ. ನಾನುಂಡ ಶೇಷವೇ ನಿನಗೆ ಪ್ರಸಾದ; ಈ ತಂಬುಲುವನ್ನು ತೆಗೆದುಕೊ. ನಿನ್ನನ್ನು ನೋಡಿದವರಿಗೆ ಯಾವ ಭಯವೂ ಇಲ್ಲ. ನೀನು ಮುಟ್ಟಿದವರಿಗೆ ಸಾವಿಲ್ಲ. ನಿನ್ನ ತಂದೆಯನ್ನು ಎತ್ತು." ಎಂದು ಹೇಳಿ ಅವನನ್ನು ಎತ್ತಿಸಿ ಕೃಪಾದೃಷ್ಟಿಯಿಂದ ನೋಡಿ ಆಕಾಶಕ್ಕೆ ನೆಗೆದನು; ಆ ಹೊಲ, ಹೊಲದಲ್ಲಿದ್ದ ಹಸುಗಳು, ನೋಡಿದ ಮೃಗಗಳೊಡನೆ ಕೈಲಾಸಕ್ಕೆ ಬಂದನು. ಅಲ್ಲಿ ಚಂಡೇಶನಿಗೆ ಗಣಪದವಿಯನ್ನು ಕೊಟ್ಟನು; ಕೈಲಾಸದಲ್ಲೆಲ್ಲ ಗುಡಿ ತೋರಣಗಳನ್ನು ಕಟ್ಟಿಸಿದನು; ಚಂಡೇಶನನ್ನು ಗಿರಿಜೆಗೆ ತೋರಿಸಿ ಆನಂದಿಸಿದನು.



## ೩. ಅಮರನೀತಿ.

ಚೋಳ ದೇಶದಲ್ಲಿ ತಿರು ನಲ್ಲೂರು ಎಂಬ ಒಂದು ಗ್ರಾಮವಿದ್ದಿತು. ಆ ಗ್ರಾಮದಲ್ಲಿ ಅಮರನೀತಿ ಎಂಬಹೆಸರಿನ ಶಿವಭಕ್ತನೊಬ್ಬನಿದ್ದನು. ಅವನಿಗೆ ಅಪಾರವಾದ ಶಿವಭಕ್ತಿಯ ಜೊತೆಯಲ್ಲಿ ಅಮಿತವಾದ ಐಶ್ವರ್ಯವೂ ಇತ್ತು. ಹೀಗಿರಲು ಅವನು ಶಿವಾರ್ಚನೆ ಮಾಡುವ ಒಂದು ಹೊಸರೀತಿಯನ್ನು ಚಿಂತಿಸಿದನು " ವಸ್ತ್ರದಿಂದ ಸುಲಭವಾಗಿ ಭಕ್ತಿಯುಂಟಾಗುವುದು. ವಸ್ತ್ರ ದಾನ ಮಾಡಿದರೆ ಈಶ್ವರನಭಕ್ತಿ ಯೊದಗುವುದು." ಹೀಗೆ ಯೋಚಿಸಿ, ತನ್ನ ಮಗನನ್ನು ಲೌಕಿಕ ವ್ಯವಹಾರದಲ್ಲಿ ನಿಯೋಜಿಸಿದನು ಅಮುತನೀತಿ. ಅನಂತರ ಅವನು ಶಿವಾಲಯಕ್ಕೆ ಬಂದು ಭಸ್ಮೋದ್ಧೂಳನ ಮಾಡಿಕೊಂಡು, ಪ್ರದಕ್ಷಿಣೆಮಾಡಿ, ಪೂಜೆಗೆ ಸಕಲ ಸಾಮಗ್ರಿಗಳನ್ನೂ ಸಿದ್ಧ ಪಡಿಸಿಕೊಂಡನು; ಶ್ರೇಷ್ಠವಾದ ರೇಷ್ಮೆಯ ವಸ್ತ್ರಗಳನ್ನು ತರಿಸಿದನು. ವಿವಿಧ ರೀತಿಯ ಸುವಸ್ತ್ರರಾಶಿಗಳೇ ಅಲ್ಲಿ ತುಂಬಿದುವು. ಆ ವಸ್ತ್ರಗಳು ನವ ಪುಷ್ಪನಿಕರದ ಪರಿಮಳದಿಂದ ಘುಮಘುಮಿಸುತ್ತಿದ್ದುವು ಅಂಥ ವಸ್ತ್ರಗಳಿಂದ ಅವನು ಶಿವಪೂಜೆಯನ್ನು ಮಾಡಿದನು. ಹೊಳೆಯುವ ದುಕೂಲಗಳನ್ನು ಶಿವನಿಗೆ ಉಡಿಸಿ, ಪರಿಮಳ ಗಂಧವನ್ನು ಪೂಸಿ, ಇಂದ್ರಿಯಗಳನ್ನೆಲ್ಲ ಶಿವನ ಕಡೆಗೆ ತಿರುಗಿಸಿ, ಏಕಮನದಿಂದ ಶಿವನನ್ನು ಹಾಡಿ, ಹೊಗಳಿ " ಅಯ್ಯೋ ! ನಾನು ಕುಸುಮತತಿ ಯಾಗಲಿಲ್ಲವೇ ! ನಿನ್ನ ಸೇವೆಗೆ ದಿವ್ಯವಸ್ತ್ರಗಳ ರೂಪನ್ನು ಪಡೆಯಲಿಲ್ಲವೆ ! " ಎಂದು ವ್ಯಥೆಪಟ್ಟನು. ಹಾಗೆಯೇ ಸುಗಂಧದ ಗುಗ್ಗುಳದಿಂದಲೂ, ಬೆಳಗುತ್ತಿರುವ ಆರತಿಯಿಂದಲೂ, ಷಡ್ರಸೋಪೇತ ದಿವ್ಯಾನ್ನಸಮರ್ಪಣದಿಂದಲೂ, ಶಿವನನ್ನು ಅವನು ಅರ್ಚಿಸಿದನು; ಪಚ್ಚಕರ್ಪೂರ ಬೆರಸಿದ ತಾಂಬೂಲಾದಿ ಭೋಗೋಪಚಾರ ಪೂಜೆಯೂ ಆಯಿತು.

ಇಂತು ಅಮರನೀತಿ ಶಂಕರನನ್ನು ಅರ್ಚಿಸುತ್ತಿರಲು ರಂಗಮಂಟಪದಲ್ಲಿ ನಿಲ್ಲಲೂ ಸ್ಥಳವಿಲ್ಲದಂತೆ, ಭಕ್ತರು ಬಂದು ಕಿಕ್ಕಿರಿದರು.

ಬಂದವರು ಅಮರನೀತಿಯ ಭಕ್ತಿಗೆ ಬೆರಗಾಗಿ ತಮತಮಗೆ ತೋರಿದಂತೆ ಮಾತಾಡಿಕೊಳ್ಳುತ್ತಿದ್ದರು. ಕೆಲವರು ಅಮರ ನೀತಿಯನ್ನು ಹರಸುತ್ತಿದ್ದರು; ಮತ್ತೆ ಕೆಲವರು " ಅವನನ್ನು ಹರಸುವುದೇಕೆ ? ನಮಗಾಗಿ ಅವನೇನು ಮಾಡುತ್ತಿಲ್ಲ" ಎನ್ನುತ್ತಿದ್ದರು. ಮತ್ತೆ ಕೆಲವರು " ಆದರೇನು, ಇಂಥವರು ಅಪರೂಪ " ಎನ್ನುತ್ತಿದ್ದರು ಇನ್ನೂ ಕೆಲವರು " ದೇವರು ಕೊಟ್ಟಿರುವಾಗ ಯಾವುದು ತಾನೇ ಅಸಾಧ್ಯ " ಎಂದರು.

ಹೀಗೆ ಶರಣರು ಕಿಕ್ಕಿರಿದು ಬಂದುದನ್ನು ನೋಡಿ ತನ್ನ ನಿಧಿಗಳೇ ಬಂದುವೆಂದು ಹೊಗಳುತ್ತ ಅವರನ್ನು ಎದುರುಗೊಂಡು ರೋಮಾಂಚದಿಂದಲೂ, ಆನಂದಾಶ್ರುವಿನಿಂದಲೂ ಕೂಡಿದನು. ಅಮರ ನೀತಿ ಅವರಿಗೆ ಕೈಮುಗಿದು, ಆಸನವನ್ನು ಕೊಟ್ಟು, ಪುಳಕ ಹೊಂದಿ ಕೊಂಡಾಡುತ್ತಿದ್ದನು. ಶರಣರಿಗೆ ಕೈಮುಗಿದು, ಏನಾದರೂ ನೆಪದಿಂದ ಮುಟ್ಟಿ, ಮಾತನಾಡಿಸಿ ಉಬ್ಬಿಹೋಗುವನು. ಹೀಗೆ ಅವನು ಅತಿಶಯವಾದ ಉತ್ಸಾಹದಿಂದ ಶರಣರ ನಡುವೆ ನಿಂತು, ಮೂಟೆಗಳನ್ನು ಬಿಚ್ಚಿ ವಸ್ತ್ರಗಳನ್ನು ತೆಗೆದಿಟ್ಟನು; ಯಾರು ಏನು ಬಯಸಿದರೂ ಅವರಿಗೆ ಅದನ್ನು ಎರಡರಷ್ಟು ಕೊಟ್ಟನು; ಮೌನದಿಂದ ಇದ್ದವರಿಗೆ ನಾಲ್ಕರಷ್ಟು ಕೊಟ್ಟನು; ಆನಂದಾತಿಶಯದಿಂದ ನೂರರಷ್ಟು ಕೊಟ್ಟನು. ಮತ್ತೆ ಮತ್ತೆ ಕೊಟ್ಟನು; ರೋಮಾಂಚ ಹೊಂದಿದನು. ಸ್ವೀಕರಿಸಿದವರು ಮೆಚ್ಚಿ ತಲೆದೂಗಿದರು; ಬೆರಗಾದರು; ಅದ್ಭುತ ದಾನವೆಂದು, ಕಂಡವರೆಲ್ಲರೂ ಕೊಂಡಾಡಿದರು. ಅಮರ ನೀತಿಯು ಹೀಗೆ ದಾನಮಾಡುತ್ತ ದೇವರಿಗೆ ದೇವಾಂಗ ವಸ್ತ್ರವನ್ನೂ ಕೌಪೀನಕ್ಕೆ ಒಳ್ಳೆಯ ವಸ್ತ್ರವನ್ನೂ ಕೊಡುತ್ತಿದ್ದನು, ಅನ್ನ, ಚಿನ್ನ ವಸ್ತ್ರಗಳನ್ನು ಕೊಡುತ್ತಿದ್ದನು. ಅವನ ದಾನ ಮನೆಯ ಮಕ್ಕಳಿಗೆಲ್ಲರಿಗೂ ಆಗುತ್ತಿತ್ತು. ತನ್ನನ್ನೇ ಯಾರಾದರೂ ಬೇಡಿದರೆ ಕೊಡುವೆನೆಂದೂ, ಹಾಗೆ ಬೇಡುವರೇ ಇಲ್ಲವೆಂದೂ ದುಗುಡ ಪಡುತ್ತಿದ್ದನು

ಅನೇಕ ವರ್ಷ ಕಳೆಯಿತು. ಇಲ್ಲಿ ಭಕ್ತರಿಗೆ ಮಾಡಿದ ವಸ್ತ್ರ ಸೇವೆ ಕೈಲಾಸದಲ್ಲಿ ಶಿವನಿಗೆ ಸೇರಿತು. ಶಿವನು ಉಟ್ಟಿದ್ದ ಹುಲಿಯ ತೊಗಲೂ, ಹೊದೆದಿದ್ದ ಗಜಚರ್ಮವೂ ಪಟ್ಟಾವಳಿಯದಾದುವು. ಪಾರ್ವತಿಯು ಉಟ್ಟಿದ್ದ ವಸ್ತ್ರವೂ ಪಟ್ಟಾವಳಿಯಾಯಿತು. ಶಿವಗಣದ ವಸ್ತ್ರವೆಲ್ಲವೂ ರೇಷ್ಮೆಯವಾದವು. ಇದನ್ನೆಲ್ಲಾ ಕಂಡು ವಿರೂಪಾಕ್ಷನಿಗೆ ಕೌತುಕ ವಾಯಿತು; ಸಂತೋಷವೂ ಆಯಿತು. "ಭೂಲೋಕಕ್ಕೆ ಹೋಗಿ, ಅಮರ ನೀತಿಯ ಭಕ್ತಿಯನ್ನು ನೋಡುವೆನು; ಅವನ ದಾನವನ್ನು ನೋಡಿ, ಕರುಣದಿಂದ ಕರೆದುಕೊಂಡು ಬರುವೆನು" ಎಂದು ಹೇಳಿ ಶಂಕರನು ನೂರುವರ್ಷದ ಮುದುಕನ ವೇಷವನ್ನು ಹಾಕಿಕೊಂಡನು: ಜೋಲಾಡುವ ಕಿವಿ, ತೆರೆಯಿಂದ ಕೂಡಿದ ಮುಖ, ತೂಗಾಡುತ್ತಿರುವ ಹುಬ್ಬು, ಬಗ್ಗಿದ ಬೆನ್ನು, ಊರು ಗೋಲ ತುದಿಯಲ್ಲಿ ಒಂದು ಕೌಪೀನ, ಹಣೆಯಲ್ಲಿ ವಿಭೂತಿ, ಈ ವೇಷದಿಂದ ಶಂಕರನು ಅಮರ ನೀತಿಯ ಊರಿಗೆ ಬಂದನು.

ವೃದ್ಧನು ಆ ಊರಿನ ಬೀದಿಗಳಲ್ಲಿ ಬರುತ್ತ ಶಿವಾಲಯವನ್ನು ಸಮೀಪಿಸಿದನು; ಅಲ್ಲಿ ಬೆಳದಿಂಗಳ ನಡುವಿನ ಚಂದ್ರನಂತೆಯೂ, ಹೊಳೆವ ಕಾಂತಿಗಳ ನಡುವಿನ ಸೂರ್ಯನಂತೆಯೂ ಶಿವಗಣದ ನಡುವೆ ಇದ್ದ ಅಮರ ನೀತಿಯನ್ನು ನೋಡಿದನು. ಸಂಭ್ರಮದಿಂದ ನೆರೆದಿದ್ದ ಭಕ್ತರನ್ನೆಲ್ಲ ನೋಡಿ ಒಂದು ಮೂಲೆಯಲ್ಲಿ ಕುಳಿತು ಸಂತೋಷ ಪಡುತ್ತಿದ್ದನು. ಅಮರ ನೀತಿ ಎಂದಿನಂತೆ ಹರಭಕ್ತರಿಗೆ ಪಟ್ಟಾವಳಿಯ ದಾನಮಾಡಿ ಅವರು ಬೇಡಿದುದನ್ನು ಕೊಟ್ಟು, ಭಕ್ತರನ್ನು ತಣಿಸುತ್ತಿದ್ದನು. ಹೀಗೆ ಮೂರು ಜಾವದ ವರೆಗೂ ದಾನಗೈದು, ಭಕ್ತರ ಕರುಣವನ್ನು ಸಂಪಾದಿಸಿ, ಅಕ್ಕ ಪಕ್ಕವನ್ನು ನೋಡಿದನು. ಮೂಲೆಯಲ್ಲಿದ್ದ ಭಕ್ತನು ಕಣ್ಣಿಗೆ ಬಿದ್ದನು. "ದೇವ, ಹತ್ತಿರ ಬನ್ನಿರಿ; ಹೊತ್ತಾಯಿತು; ಸುಮ್ಮನೆ ಇರುವಿರಿ ಏಕೆ? ಒಂದು ಅರಿವೆಯನ್ನು ಉಟ್ಟು ಮತ್ತೊಂದನ್ನು ಹೊದೆದು, ಕೋಲ

ತುದಿಯಲ್ಲಿ ಒಂದು ಕೌಪೀನವನ್ನು ಕಟ್ಟಿಕೊಂಡಿದ್ದೀರಿ. ಈ ಪಟ್ಟಾವಳಿಯನ್ನು ಉಟ್ಟುಕೊಂಡು, ಹೊದೆದುಕೊಂಡು ಸಂತೋಷ ಪಡಿರಿ." ಎಂದು ಹೇಳಿ ಒಂದು ವಸ್ತ್ರಗಳ ಕಟ್ಟನ್ನೇ ವೃದ್ಧನ ಮುಂದಿರಿಸಿದನು. ಅದನ್ನು ನೋಡಿ ವೃದ್ಧನು ಗಹಗಹಿಸಿದನು ಅದನ್ನು ನೋಡಿದ ಅಮರ ನೀತಿಯು "ಇವು ಸಾಲದಿದ್ದರೆ ಮತ್ತಷ್ಟು ಕೊಡುತ್ತೇನೆ. ಇದನ್ನು ನಿಮ್ಮ ಅರಸಿಯರಿಗೆ ಕೊಡಿ." ಎಂದು ಹೇಳಿ ಮತ್ತಷ್ಟು ಪಟ್ಟಾವಳಿಯನ್ನು ಕೊಟ್ಟನು. ಅದನ್ನು ನೋಡಿ ವೃದ್ಧನು, "ಸಾಕು ತೆಗೆ; ನಿನ್ನ ಐಶ್ವರ್ಯ ವನ್ನೆಲ್ಲ ನನಗೇಕೆ ತೋರಿಸುವೆ? ಬಡವರು ಉಡುವ ವಸ್ತ್ರಗಳೇ ನಮಗೆ ದೊಡ್ಡವು. ಇವು ನಮಗೇಕೆ? ಶಿವನ ಭಕ್ತರಿಗೆಇವು ಏಕೆ! ನಾವು ಹೀಗೇ ಇದ್ದು ಇದ್ದೂ ಬಡವರಾಗಿದ್ದೇವೆ; ಮುದುಕರಾಗಿದ್ದೇವೆ. ನಾವು ಶಿವಭಕ್ತರನ್ನು ನಡೆದಾಡಿಸಿ ದಾನಮಾಡುವರಲ್ಲ; ಬಳಲಿಸುವವರಲ್ಲ. ನಮ್ಮವರು ಭಕ್ತರಿದ್ದೆಡೆಗೆ ದಿಂಡನ್ನು ಹೊತ್ತು ಕೊಂಡು ಹೋಗಿ ಕೊಡುವರು; ಅವರ ಹತ್ತಿರ ಹೋಗಿ ಸೇವೆಮಾಡುವರು. ನಮ್ಮವರು ಧನ ಧಾನ್ಯ ರತ್ನ ರಾಶಿಯನ್ನು ಮನೆಗೆ ತಂದು ಕೊಡುವರು. ಈ ಕಾಲುಗಳು ಶಿವಭಕ್ತರನ್ನು ಅರಸದುವು; ನಿಂದು ದಾನಮಾಡಿದವು. ಕೊನೆಗೆ ಅಸ್ಥಿರವಾದ ಸುಖವನ್ನು ಬಿಟ್ಟು ಶಿವಕ್ಷೇತ್ರಗಳನ್ನೂ ಶಿವಭಕ್ತರನ್ನೂ ಸಂದರ್ಶಿಸುತ್ತಾ ದಾರಿಯಲ್ಲಿ ನಿಮ್ಮೂರಿಗೆ ಬಂದೆವು. ನಮಗೆ ಕೇವಲ ಭಕ್ತರ ದರ್ಶನವೇ ಸಾಕು; ಅವರ ಒಡವೆ ಬೇಡ." ಎಂದು ಹೇಳಿ ವ್ಯಂಗ್ಯವನ್ನು ವ್ಯಕ್ತ ಪಡಿಸುತ್ತ ಅಮರ ನೀತಿಯನ್ನು ಕೊಂಡಾಡಿದನು. ಅದಕ್ಕೆ ಅಮರ ನೀತಿಯು,

"ದೇವ, ಬಿನ್ನಪ; ಈಶ್ವರನ ಭಕ್ತರು ಬಹಳ ಕರುಣಾಳುಗಳು; ಹುಡುಕುವ ಮೊದಲೇ ಬಂದಿದ್ದಾರೆ. ಅವರು ಮರೆಯಲವಕಾಶ ಕೊಡದೆ ಕರುಣೆಯಿಂದ ಬರುವರು ನಾನೆಷ್ಟರವನು. ಅದು ಹಾಗಿರಲಿ, ಇಂದು, ದೇವರ ಬಯಕೆ ಏನೆಂಬುದು ಅಪ್ಪಣೆಯಾಗಬೇಕು" ಎಂದನು ಅದಕ್ಕೆ

ವೃದ್ಧನು "ನಾವು ಇದೇನೂ ಬೇಡಬರಲಿಲ್ಲ. ಮನಸ್ಸಿನಲ್ಲಿ ಮನುಷ್ಯರನ್ನು ಚಿಂತಿಸುವುದಿಲ್ಲ. ನೀನು ಶರಣರಿಗೆ ಮಾಡುತ್ತಿರುವ ಆದರಣೆಯನ್ನು ಕೇಳಿ, ನೋಡುವ ಆಶೆಯಿಂದ ಬಂದೆವು. ನಮಗೆ ಒಬ್ಬ ಭಕ್ತನ ಮನೆಯಲ್ಲಿ ಔತಣ. ಈ ಕೌಪೀನ ಒಂದು ಅಡ್ಡಿಯಾಗಿದೆ. ಇದನ್ನು ರಕ್ಷಿಸಿಟ್ಟುಕೊಡು." ಎಂದು ಹೇಳಿ ಆ ಕೌಪೀನವನ್ನು ಕೊಟ್ಟನು.

ಅಮರನೀತಿ ಅದನ್ನು ತೆಗೆದುಕೊಂಡು ತನ್ನವನೊಬ್ಬನ ಕೈಗೆಕೊಟ್ಟನು. ಅದನ್ನು ಕಂಡು ವೃದ್ಧನು "ಮತ್ತೊಬ್ಬರನ್ನು ನಂಬದೆ ನಿನ್ನ ಕೈಗೆ ನಾನು ಕೊಡಲು, ನೀನು ಇತರರಿಗೆ ಕೊಡಬಹುದೆ? ಇದು ಮೂರು ಜಗದಲ್ಲಿಯೂ ಶ್ರೇಷ್ಠವಾದುದು. ನನ್ನ ಭಕ್ತರು ಭಕ್ತಿಯಿಂದ ಕೊಟ್ಟ ಕೌಪೀನವಿದು. ಬ್ರಹ್ಮಾದಿಗಳು ಬಯಸಿದರೂ ಇದು ಸಿಕ್ಕದು. ಈ ಕೌಪೀನವು ನೆನೆದುದನ್ನು ಕೊಡುವುದು; ಬಯಸಿದುದನ್ನು ಕೊಡುವುದು; ನುಡಿದುದನ್ನು ಕೊಡುವುದು; ಬೇಡಿದುದನ್ನು ಕೊಡುವುದು; ಇದನ್ನು ಸುರಕ್ಷಿತವಾಗಿ ಇಟ್ಟುಕೊಂಡಿರುವುದು" ಎಂದು ಹೇಳಿ ಆನಂದದಿಂದ ಹೋದನು.

ಇತ್ತ ಅಮರನೀತಿ ಕೌಪೀನವನ್ನು ಒಂದು ದಿಂಡಿನಲ್ಲಿಟ್ಟು, ಮನದಲ್ಲಿ ಆಶ್ಚರ್ಯಪಡುತ್ತ ಮನೆಗೆ ಬಂದನು. "ಈಶ್ವರನು ಈದಿನ ನನ್ನನ್ನು ಹಾಸ್ಯಮಾಡಿದನು; ಮನಸ್ಸಿನಲ್ಲಿ ಕಳಂಕವಿಲ್ಲದ ಅದ್ಭುತವರ್ತನೆ ಇದು; ಭಕ್ತನ ಭಾವವೇನಿರಬಹುದು? ಎಂದು ವೃದ್ಧನ ಮಾತನ್ನೇ ಧ್ಯಾನಿಸುತ್ತ ನಿದ್ರಿಸಿದನು.

ಮರುದಿನ ಬೆಳಿಗ್ಗೆ ಶಿವೋದಯವನ್ನು ಸೂಚಿಸುವಂತೆ ಸೂರ್ಯೋದಯವಾಯಿತು. ಅಮರನೀತಿ ಎಂದಿನಂತೆ ದೇವಾಲಯಕ್ಕೆ ಬಂದನು; ದೇವರಿಗೆ ವಸ್ತ್ರಪೂಜೆ ಗೈದು, ರಂಗಮಂಟಪದಲ್ಲಿ ಶರಣರಿಗಾಗಿ ಕಾದು ಕುಳಿತನು. ಸಾವಿರ ಲೆಕ್ಕದಲ್ಲಿ ಶರಣರು ಬಂದುದನ್ನು ನೋಡಿ ಅಮರ

ನೀತಿಯ ಆನಂದಕ್ಕೆ ಪಾರವೇ ಇರಲಿಲ್ಲ. ಹೀಗೆ ಶರಣಸಂಕುಲದ ನಡುವೆ ಅಮರ ನೀತಿಯು ಕುಳಿತಿರಲು ಕೌಪೀನದ ಭಕ್ತನು ಸರಸರನೆ ಬಂದನು. ಅಮರ ನೀತಿಗೆ ಬಲಗಣ್ಣು ಅದುರಿ ಸಂತೋಷದಿಂದ ರೋಮಾಂಚ ವುಂಟಾಯಿತು. ಆ ವೃದ್ಧನು ಶಿವಭಕ್ತರನ್ನೆಲ್ಲ ದಾಟಿ ಆತುರದಿಂದ ಬಂದು "ನನ್ನ ಕೌಪೀನವನ್ನು ಕೊಡು; ನಮ್ಮ ಭಕ್ತರ ಗುಂಪು ಅಲ್ಲಿ ಹೋಗುತ್ತಿದೆ; ನಿಧಾನಿಸಬಾರದು; ತ್ವರಿತ ಕೊಡು," ಎಂದನು. ಅಮರನೀತಿಯು ಬೆರಗಾಗಿ "ಕೌಪೀನಕ್ಕೆ ಇಷ್ಟು ಸಂಭ್ರಮ ತಕ್ಕುದಲ್ಲ; ಸ್ವಲ್ಪ ಸೈರಿಸಿರಿ, ದೇವ;ಕೊಡುತ್ತೇನೆ" ಎಂದು ಹೇಳಿ ತಾನು ಬಚ್ಚಿಟ್ಟಿದ್ದ ದಿಂಡನ್ನು ತೆಗೆದು ನೋಡಿದನು. ಅದನ್ನು ಕಾಣದೆ ಎಲ್ಲ ಗಂಟುಗಳಲ್ಲಿಯೂ ಚೆನ್ನಾಗಿ ನೋಡಿ, ಕೌಪೀನವನ್ನೇ ಕಾಣದಾದನು.

ಇದನ್ನು ನೋಡಿದ ವೃದ್ಧ ಶಿವಭಕ್ತನು ಉರಿದೆದ್ದು, ಹೊಟ್ಟೆಯನ್ನು ಹೊಸೆದುಕೊಂಡು ವ್ಯಸನದಿಂದಲೂ ಕೋಪದಿಂದಲೂ "ಭಕ್ತಜನರೇ, ನೋಡಿದಿರಾ! ಅಮರನೀತಿಯ ಸಲಕರಣೆ ಅಸಾಧ್ಯ. ನಿನ್ನೆಯ ದಿನ ನಾನೊಂದು ಕೌಪೀನವನ್ನು 'ಬಚ್ಚಿಟ್ಟಿದ್ದು ಕೊಡು' ಎಂದು ಕೊಟ್ಟೆ ಅದನ್ನು ತೆಗೆದುಕೊಂಡು ಈದಿನ 'ಅದು ಹೊಯಿತು' ಎಂದು ಹೇಳುವ ಮಾತನ್ನು ಕೇಳಿರಿ. ಕೊನೆಗೆ ನನ್ನನ್ನು ಕೆಟ್ಟವನೆನಬೇಡಿ." ಎಂದನು ಆಗ ಅಮರನೀತಿಯು "ದೇವ, ನಾನೇ ಅದನ್ನು ತೆಗೆದು ಕೊಂಡೆನೆ? ಅದು ತಾನೇ ಕಳೆದು ಹೋಗಿದೆ. ಅದು ನನಗೆ ಗೊತ್ತೇ! ಇದಕ್ಕೆ ನೀವು ಇಷ್ಟು ಕೋಪವನ್ನು ಮಾಡಬೇಕೆ? ಈಗಲೇ ತೆಗೆದು ಕೊಳ್ಳಿ; ಅದಕ್ಕಾಗಿ ನಾಲ್ಕೈದು ಪಟ್ಟಾವಳಿಯ ಕಟ್ಟುಗಳನ್ನು ತೆಗೆದು ಕೊಳ್ಳಿ" ಎಂದನು ವೃದ್ಧನು ಆ ಪಟ್ಟಾವಳಿಯ ಕಟ್ಟುಗಳನ್ನು ಒದೆದು ನೂಕಿದನು; ಕೂಡಿದ ಸಭೆ ಅವನ ಕೋಪಕ್ಕೆ ನಡುಗಿತು. "ಎಲವೊ, ನಿನ್ನ ಪಟ್ಟಾವಳಿ, ನೇತ್ರಾವಳಿಗೆ ನನ್ನ ಕೌಪೀನ ಸಮವೆ? ನನ್ನ ಕೌಪೀನವೇ ನನಗೆಸಾಕು. ನಿನಗೆಅದರ ಮಹಿಮೆ ತಿಳಿಯದು. ಹೋಗಲಿ, ಅದರಲ್ಲಿ

ಮಹಿಮೆಯಿಲ್ಲ ; ಬರಿಯ ಕೌಪೀನ. ಮೋಸ ವೇಕೆ? ಭಕ್ತರ ವಸ್ತುವನ್ನು ಕೊಡು. ಕೊಡುವುದು, ತೆಗೆದು ಕೊಳ್ಳುವುದು, ಒಳ್ಳೆಯ ಮಾತನಾಡುವುದು-ಇವು ಭಕ್ತರಲ್ಲಿ ವಿಹಿತವಾದುವು. ನಮಗೆ ಹೀಗೆ ಮಾಡುವುದೂ, ಹೇಳುವುದೂ ನಿಮಗೆ ಒಳ್ಳೆಯ ಗುಣವೇ ? " ಎಂದು ನಿಂದಿಸಿದನು.

ಏನೆಂದರೂ ಅಮರನೀತಿ ಸುಮ್ಮನಿದ್ದನು. ಅದನ್ನು ಕಂಡು ಮತ್ತೆ ವೃದ್ಧನು " ಇನ್ನೂ ಒಂದು ಬಾರಿ ಕೇಳುತ್ತೇನೆ. ಕೊಡದಿದ್ದರೆ ನನ್ನ ಪ್ರಾಣವನ್ನೇ ಒಪ್ಪಿಸುತ್ತೇನೆ. ಅದರಿಂದ ನಿನಗೆ ಸಂತೋಷವಾಗಬಹುದು. ನನ್ನನ್ನು ಹುಡುಕುವ ಭಕ್ತರು ನಿನಗಿಂತಲೂ ಬಲ್ಲಿದರು. " ಎಂದು ಕೋಪಮಾಡುತ್ತಿದ್ದನು.

ಭಕ್ತರೆಲ್ಲರೂ ಬೆರಗಾದರು ; ನಿಟ್ಟುಸಿರು ಬಿಟ್ಟರು. " ಈದಿನ ಭಕ್ತರಸೇವೆಯನ್ನು ಇವನು ತಪ್ಪಿಸಿದನಲ್ಲ ! ಎಲ್ಲರ ಪಾಪವನ್ನೂ ಕಟ್ಟಿಕೊಂಡನಲ್ಲ ! ಕೌಪೀನಕ್ಕೆ ಬದಲು ಏನನ್ನೂ ಒಲ್ಲನಲ್ಲ ! ಇದು ಆಶ್ಚರ್ಯ !" ಎಂದು ಭಕ್ತರೆಲ್ಲರೂ ತಂತಮ್ಮಲ್ಲಿಯೇ ಆಲೋಚಿಸಿಕೊಂಡು " ಈ ಭಕ್ತನು ಹಿಡಿದ ಹಟವನ್ನು ಬಿಡ; ಒಂದು ಹೊಸ ಕೌಪೀನವನ್ನೂ ಒಂದು ಸಾವಿರ ಹೊನ್ನನ್ನೂ ಅಮರನೀತಿಯಿಂದ ಕೊಡಿಸಿ, ಅವನ ಹಟವನ್ನು ಬಿಡಿಸೋಣ " ಎಂದು ತೀರ್ಮಾನಿಸಿಕೊಂಡರು. ಅಂತೆಯೇ ಅವರು ವೃದ್ಧ ಭಕ್ತನನ್ನು ಕುರಿತು" ದೇವ, ನಮ್ಮ ಮಾತನ್ನು ಸಲಿಸಬೇಕು ; ನಮ್ಮೆಲ್ಲರನ್ನು ನೋಡಬೇಕು ; ನಿಮ್ಮ ಕೌಪೀನಕ್ಕೆ ಸರಿಯೆಂದು ಒಂದು ಸಾವಿರ ಹೊನ್ನನ್ನೂ ಹೊಸ ಕಪೀನವನ್ನೂ ತೆಗೆದುಕೊಂಡು. ಈ ಭಕ್ತರಿಗೆಲ್ಲ ಸಂತೋಷವನ್ನುಂಟು ಮಾಡಬೇಕು" ಎಂದು ಕೇಳಿಕೊಂಡರು. ಅದಕ್ಕೆ ಆ ಭಕ್ತನು ರೇಗಿ, ಮರುಗಿ, " ಅಯ್ಯಾ ಭಕ್ತರೇ ಕೊಡುವವನ ಅಪೇಕ್ಷೆಯನ್ನೇಕೆ ತಪ್ಪಿಸುತ್ತೀರಿ ! ಬಡವನೂ ಅನಾಥನೂ ಆದ ನನ್ನ ಪಕ್ಷವನ್ನು ವಹಿಸಿ. ಆ ನನ್ನ ಕೌಪೀನ ಸಾಧಾರಣ ವಾದುದೆಂದು ತಿಳಿದಿರಾ? ಅದು ಸ್ಪರ್ಶ

ಶಿಲೆ; ಚಿಂತಾಮಣಿವ್ರಜ; ಕಾಮಧೇನುಗಳ ಮೇಲು ಹೊದಿಕೆ; ಕಲಲ್ಪತೆಯ ಕೌಪೀನ; ನಿಮ್ಮ ಹೊನ್ನು ಕೌಪೀನವನ್ನು ತೆಗೆದು ಕೊಳ್ಳಲೇ? ನೀವೆಲ್ಲರೂ ಮಧ್ಯಸ್ಥಗಾರರೇ ? ಅಮರನೀತಿ, ಇವರಿಗೆ ನಾನು ಕೊಟ್ಟೆನೇನು?" ಎಂದು ಕೂಗಾಡಿದನು. ಆಗ ಭಕ್ತರೆಲ್ಲರೂ ನಾಚಿಕೆಪಟ್ಟು ಕೊಂಡು ಸುಮ್ಮನಾದರು.

ಅಮರ ನೀತಿಯು " ಮಾತಿಗೆ ಅವಕಾಶವಿಲ್ಲ; ನನ್ನದೇ ತಪ್ಪು ; ಇವರು ಒಂದು ಕೌಪೀನವನ್ನು ಕೊಟ್ಟರು; ನಾನು ಇಸಕೊಂಡೆನು; ಅದು ಕಳೆದು ಹೋಯಿತು; ಇದಕ್ಕಾಗಿ ಇವರು ಮಾಡಿದಂತೆ ಮಾಡಿಸಿ ಕೊಳ್ಳುವೆನು; ಕಾಡಿದಂತೆ ಕಾಡಿಸಿಕೊಳ್ಳುವೆನು; ನೀವೆಲ್ಲರೂ ಹಸಿದಿರಿ; ಬಳಲಿದಿರಿ. " ಎಂದನು.

ಆ ಮಾತನ್ನು ಕೇಳಿ ಭಕ್ತರೆಲ್ಲರೂ ಮರುಗಿ ದಾರಿಕಾಣದೆ, " ಇದು .ಈಶ್ವರನಿಗಲ್ಲದೆ, ಬೇರೆಯವರಿಗೆ ತಿಳಿಯಲು ಅಸಾಧ್ಯ" ಎಂದು ಹೊರಡಲು ಉದ್ಯುಕ್ತರಾದರು.

ಆಗ ಈಶ್ವರನು ಅವರನ್ನು ಹೋಗಬಿಡಬಾರದೆಂದು ಯೋಚಿಸಿ ಹೀಗೆಂದನು – " ನೀವು ಹೋಗಬೇಡಿ ನೀವು ಹೇಳಿದ ರೀತಿಯಲ್ಲಿಯೇ ನಾನು ಒಂದನ್ನು ಹೇಳುತ್ತೇನೆ. ಈತನು ಕೌಪೀನವನ್ನು ಕೊಂಡನು; ಆತನಿಗೆ ಛಲವಾದರೂ ನಾನು ಛಲಮಾಡಲಾರೆನು. ಭಕ್ತರಿಗೆಲ್ಲ ತೊಂದರೆಯಾಗುವುದು ನನಗಿಷ್ಟವಿಲ್ಲ. ನನ್ನಲ್ಲಿ ಬೇರೊಂದು ಕೌಪೀನವಿದೆ. ಅದರ ತೂಕಕ್ಕೆ ಸರಿಯಾದ ಮತ್ತೊಂದು ಕೌಪೀನವನ್ನು ಕೊಟ್ಟರೆ ಸಾಕು. "

ಎಲ್ಲರೂ ಹರುಷ ಪಟ್ಟರು. ಅಮರನೀತಿಯನ್ನು ಆಲಂಗಿಸಿ ಕೊಂಡರು ; ದೇವರು ದಯೆಮಾಡಿದನೆಂದು ಸಂಭ್ರಮದಿಂದ ಕಿರಿಯ ತ್ರಾಸೊಂದನ್ನು ತರಿಸಿದರು ; ಹರಕರುಣೆಗೆ ಹಿಗ್ಗಿದರು. ಕೌಪೀನವನ್ನು

ತ್ರಾಸಿನ ತಟ್ಟೆ ಯಲ್ಲಿರಿಸಲು, ಅದು ಶತಚೂರ್ಣವಾಯಿತು. ಮತ್ತೊಂದು ದೊಡ್ಡ ತ್ರಾಸನ್ನು ತರಿಸಿ ಅದರಲ್ಲಿ ಕೌಪೀನವನ್ನು ಇರಿಸಿದರು. ಅದು ನುಚ್ಚು ನೂರಾಯಿತು. ಅಮರ ನೀತಿಯು ರಂಗಮಂಟಪದಿಂದ ಹೊರಗೆ ಬಂದು ಎರಡು ದೊಡ್ಡ ಕಂಬಗಳನ್ನು ತರಿಸಿ, ಒಂದನ್ನು ನಡಿಸಿ, ಮತ್ತೊಂದನ್ನು ಅದರಮೇಲೆ ಅಡ್ಡಕ್ಕೆ ಹಾಕಿಸಿದನು. ಅದರ ಎರಡು ತುದಿಯಲ್ಲೂ ದೊಡ್ಡ ಕಬ್ಬಿಣದ ಸರಪಣಿಗಳನ್ನು ಬಿಗಿಸಿ, ಕೊಪ್ಪರಿಗೆ ಯಂತಹ ದೊಡ್ಡ ಹಲ್ಲೆಗಳನ್ನು ಅವಕ್ಕೆ ಕಟ್ಟಿಸಿದನು. ಭಕ್ತನನ್ನು ಕರೆದು ಅಮರನೀತಿ ಅವರ ಕೌಪೀನವನ್ನು ಇಡುವಂತೆ ಕೇಳಿಕೊಂಡನು. ಆಗ ಭಕ್ತನು ನಸುನಗುತ್ತ, ತನ್ನ ಕೌಪೀನವನ್ನು ತ್ರಾಸಿನ ಒಂದು ತಟ್ಟೆಯಲ್ಲಿಟ್ಟನು. ಒಂದು ತಟ್ಟೆ ನೆಲಕ್ಕೆ ಹತ್ತಿತು; ಇನ್ನೊಂದು ಆಕಾಶಕ್ಕೆ ನೆಗೆಯಿತು ಎಲ್ಲರೂ ಈ ಹೊಸ ರೀತಿಯನ್ನು ಕಂಡು ಆಶ್ಚರ್ಯ ಪಟ್ಟರು.

ಅಮರನೀತಿಯು ಕಡೆಯವರು ಏಣಿಗಳನ್ನು ಹಾಕಿಕೊಂಡು ಬೆಲೆಯಾದ ಪಟ್ಟಾವಳಿಯ ಮೂಟೆಗಳನ್ನೆ ತ್ರಾಸಿನಲ್ಲಿ ಒಟ್ಟಿದರು. ಆದರೂ ಕೌಪೀನದ ಹಲ್ಲೆ ಅಲ್ಲಾಡಲಿಲ್ಲ. ಎಲ್ಲರಿಗೂ ಆಶ್ಚರ್ಯ! ಆ ಪಟ್ಟಣದ ವ್ಯಾಪಾರಿಗಳಲ್ಲಿದ್ದ ಎಲ್ಲ ವಸ್ತ್ರವನ್ನೂ ಅದರಲ್ಲಿ ಏರಿಸಿ ಆಯಿತು. ಹಲ್ಲೆ ಚಲಿಸಲಿಲ್ಲ; ತಮ್ಮ ಮನೆಯಲ್ಲಿದ್ದ ಹಣವನ್ನೂ ರತ್ನಾಭರಣಗಳನ್ನೂ ತಂದು ಬೆಟ್ಟದಂತೆ ರಾಶಿಹಾಕಿದರು. ಆದರೂ ಅಲುಗಲಿಲ್ಲ ಅಮರನೀತಿ ಬೆಂದು ಬೆಂಡಾಗಿ ಆ ಕೌಪೀನವನ್ನು ಮನದಲ್ಲಿಯೇ ಶಪಿಸುತ್ತ, ಬೆರಗಾಗಿ ನಿಂತನು ಪುರಜನರು ತಮತಮಗೆ ತೋರಿದಂತೆ ಮಾತಾಡತೊಡಗಿದರು. ಕೆಲವರು ಪುರಜನರನ್ನೂ ಪರಿಜನವನ್ನೂ ಹಾಳು ಮಾಡಲು ಈ ಕೌಪೀನ ಬಂದಿತು ಎಂದರು; ಮತ್ತೆ ಕೆಲವರು ದೇವರು ಪ್ರೀತಿಯಿಂದ ಕಾಡಿಸಲು ಬಂದನೆಂದರು. ಅಮರನೀತಿಗೆ ಯಾವುದೂ ಅಸಾಧ್ಯ ವಲ್ಲವೆಂದು ಮತ್ತೆ

ಕೆಲವರು ಹೇಳಿದರು, ದಾನಿಯನ್ನು ಕೆಡಿಸಿದನೆಂದು ಇನ್ನೂ ಕೆಲವರು ಅಂದರು.

ಇದ್ದಕ್ಕಿದ್ದಹಾಗೆಯೇ ಅಮರನೀತಿಗೆ ಒಂದು ಉಪಾಯವು ಹೊಳೆಯಿತು ; ಸತಿಸುತರನ್ನು ಕರೆಸಿದನು. ಮಗನನ್ನು ಕುರಿತು "ಮಗನೆ, ನಿನ್ನ ವ್ಯವಹಾರಸಾಕು. ಭಕ್ತರ ಸೇವೆಯೂ ಸಾಕು. ನಾವೆಲ್ಲರೂ ಕೌಪೀನಕ್ಕೆ ಸೇವಕರಾದೆವು. ಕೌಪೀನವು ನಮ್ಮನ್ನೆಲ್ಲ ನುಂಗಿತು." ಎಂದು ಹೇಳಿ ಮಗನಿಗೆ ಭಸ್ಮಲೇಪನ ಮಾಡಿಸಿದನು ರುದ್ರಾಕ್ಷಮಾಲೆಯನ್ನು ಇಕ್ಕಿ ಹೊಸ ವಸ್ತ್ರವನ್ನು ಉಡಿಸಿದನು. ಅವನನ್ನು ಏಣಿಗೆ ಹತ್ತಿಸಿ ತ್ರಾಸಿನ ತಟ್ಟೆಯಲ್ಲಿ ಕೂಡಿಸಿದನು. ಆಗ ಅವನ ಹೆಂಡತಿ ತಾನಿರುವಾಗ ಮಗನೇಕೆನಲು ಶಿವ ಮಹಿಮೆಯನ್ನು ಅರಿದ ಅಮರನೀತಿ ಮಗನಿಂದಲಾಗಲಿ, ಅವಳಿಂದಲಾಗಲಿ ಆ ಕಾರ್ಯ ಪೂರೈಸಲಾರದೆಂದು ಹೇಳಿದನು. ಜನರೆಲ್ಲರೂ ಅಮರನೀತಿಯ ಕಲಿತನವನ್ನು ಕೊಂಡಾಡುತ್ತಿರಲು, ನೆಲಕ್ಕೆ ಹತ್ತಿದ್ದ ತ್ರಾಸಿನ ಹಲ್ಲೆಯು ಸ್ವಲ್ಪವೇ ಏರಿದ್ದಿತು. ಅಮರನೀತಿಯ ಸಂತೋಷಕ್ಕೆ ಪಾರವೇ ಇರಲಿಲ್ಲ. ವೃದ್ಧನನ್ನು ಕುರಿತು "ಭಕ್ತನೇ, ಸಂತೋಷವೇ?" ಎನ್ನಲು ಅವನು "ನನ್ನ ಮೇಲೆ ನಿನಗೇತಕ್ಕಯ್ಯಾ ಕೋಪ! ನಿನ್ನ ಮಗನನ್ನು ಕೂಡಿಸೆಂದು ನಾನು ಹೇಳಲಿಲ್ಲ, ಮಗನೂ, ಹೆಂಡತಿಯೂ, ನೀನೂ, ನೆರೆದ ಜನ – ಯಾರು ಕುಳಿತರೆ ನನಗೇನು? ನನ್ನ ಕೌಪೀನಕ್ಕೆ ಸರಿಯಾದರೆ ಸಾಕು. ಈ ಕೋಪ ನಿನಗೆ ತಕ್ಕದಲ್ಲ ಎಂದನು.

ಅಮರನೀತಿ ವೃದ್ಧನ ಮಾತಿನ ಹೊಸರೀತಿಗೆ ಆಶ್ಚರ್ಯ ಪಡುತ್ತ, ತನ್ನ ಹೆಂಡತಿ ಏಣಿಯನ್ನು ಹತ್ತಲಾರಳಾದುದರಿಂದ ತಾನೇ ಅವಳನ್ನು ಎತ್ತಿಕೊಂಡು ಹತ್ತಿ, ತ್ರಾಸಿನಲ್ಲಿ ಕೂಡಿಸಿದನು. ಪ್ರಪಂಚವೇ ಅವನನ್ನು ಹೊಗಳಿತು. ಕೌಪೀನದ ಹಲ್ಲೆಯು ಮತ್ತಷ್ಟು ಮೇಲಕ್ಕೆದ್ದಿತು. ಅಮರ

ನೀತಿ ಹರುಷದಿಂದ ಆರ್ಭಟಿಸುತ್ತ, ವಿಭೂತಿರುದ್ರಾಕ್ಷಿ ಧಾರಣೆ ಮಾಡಿ ಕೊಂಡು, ಒಳ್ಳೆಯ ವಸ್ತ್ರವನ್ನುಟ್ಟು, ದೇವಾಲಯದ ರಂಗಮಂಟಪಕ್ಕೆ ಬಂದು "ದೇವ, ಷಟ್ಸ್ಥಾವಳಿಯ ಪೂಜೆ ಇಂದಿಗೆ ಪೂರ್ಣ; ಸ್ವೀಕರಿಸು. ಭಕ್ತರ ಬರವು ಇಂದಿಗೆ ಪೂರ್ಣ; ಅಮರನೀತಿಯ ಭಕ್ತಿ ಕಾಂತಿ ಗುಂದಿತು; ಕಡಿಮೆಯಾಯಿತು. ಶಿವಾರ್ಚನೆಯ ಫಲ ಇಂದು ದೊರಕಿತು; ಕೌಪೀನವು ಒಳ್ಳೆಯದು ಮಾಡಿತು." ಎಂದು ಬಿನ್ನವಿಸಿಕೊಂಡು ಹೊರಗೆ ಬಂದು, ನೆರೆದಿದ್ದ ಭಕ್ತರನ್ನು ಕುರಿತು ಹೀಗೆ ಬಿನ್ನಪ ಮಾಡಿಕೊಂಡನು-"ಎಲೈ ಭಕ್ತರೇ, ಇಷ್ಟುದಿನ ನೀವು ನನ್ನನ್ನು ಕಾಪಾಡಿದಿರಿ; ನಿಮ್ಮಿಂದ ನಾನು ಭಕ್ತಿವಂತನಾದೆನು. ನಿಮ್ಮ ಪಾದಧೂಳಿ ನನಗೆ ಬಾಯಬೆಣ್ಣೆ ಯಾಯಿತು. ನಿಮ್ಮ ಪಾದವೇ ನಾನು ಬೆಳೆಯುವ ತೊಟ್ಟಿಲಾಯಿತು. ನಿಮ್ಮ ಬರವೇ ನನ್ನ ಪ್ರಾಣ. ಬ್ರಹ್ಮಾದಿಗಳು ಬಯಸಿದರೂ ಸಿಕ್ಕದ ನಿಮ್ಮ ಸಂಗಸುಖ ನನಗಿತ್ತು, ಈ ಭಕ್ತನಿಂದ ಅದು ತಪ್ಪಿತು. ನನಗೆ ಇನ್ನು ಕೌಪೀನದ ಸೇವೆ ದೊರೆಕೊಂಡಿತು. ಆದ್ದರಿಂದ ಇನ್ನು ಈ ಭಕ್ತನೊಡನೆ ಜೀವಿಸುವೆನು. ನೀವೆಲ್ಲರೂ ನನ್ನನ್ನು ಆಶೀರ್ವದಿಸಿ, ಕಳುಹಿಸಿ ಕೊಡಿ. ಇಷ್ಟುದಿನ ನಾನೊಬ್ಬ ಸೇವಕ, ನನ್ನ ಐಶ್ವರ್ಯ, ನನ್ನ ಹೆಂಡತಿ ಮಕ್ಕಳು ಎಂದು ಯೋಚಿಸಿದ್ದರೂ ಶ್ರೀ ಗುರುವಿನಾಜ್ಞೆಯಿಂದ ನಡೆದುಕೊಂಡೆವು. ನಾನು ಬಯಸದಿದ್ದರೂ ಈ ಶಿವ ಭಕ್ತರು ಬಂದರು, ಇದೇ ನನ್ನ ಸಂತೋಷ"

ಬಳಿಕ ಅಮರ ನೀತಿ ವೃದ್ಧ ಭಕ್ತನಲ್ಲಿಗೆ ಬಂದನು. ಆ ಮಾಹೇ ಶ್ವರನು ಮಹೇಶ್ವರನಾಗುವ ತೀವ್ರ ಆಪೇಕ್ಷೆಯನ್ನು ಕಷ್ಟದಿಂದ ತಡೆದು ಕೊಂಡನು. ಅಮರನೀತಿಯು ಆ ಕೌಪೀನಕ್ಕೆ ಸರಿತೂಕ ವಾಗುವೆನೆಂದು ವೃದ್ಧನಲ್ಲಿ ಬಿನ್ನವಿಸಿಕೊಂಡು, ಏಣಿಯನ್ನು ಹತ್ತಿ, ಶಿವ ಭಕ್ತರಿಗೆ ಕೈ ಮುಗಿದು, ಹರನನ್ನು ಮನದಲ್ಲಿ ನೆನೆಯುತ್ತ ಹಲ್ಲೆಯಲ್ಲಿ ಕುಳಿತನು

ಏನಾಶ್ಚರ್ಯ ! ! ! ವೃದ್ಧ ಭಕ್ತನ ವೇಷ ಮರೆಯಾಯಿತು. ಶಂಕರನ ದಿವ್ಯರೂಪ ಕಾಣಿಸಿಕೊಂಡಿತು. ಕೌಪೀನ ವಿದ್ದ ಹಲ್ಲೆಯನ್ನು ಏರಿದನು. ದೇವ-ಭಕ್ತರತೂಕ ಸಮವಾಯಿತು.ಒಂದುಕಡೆ ವೃಷಭಧ್ವಜನು; ಮತ್ತೊಂದುಕಡೆ ಭಕ್ತಿಧ್ವಜನು. ಒಂದುಕಡೆ ಶಂಕರನಾದರೆ, ಇನ್ನೊಂದು ಕಡೆ ಕಿಂಕರನು. ಒಂದು ಹಲ್ಲೆಯಲ್ಲಿ ಕರುಣಾಕರ; ಇನ್ನೊಂದು ಹಲ್ಲೆಯಲ್ಲಿ ಭಕ್ತಾಗ್ರೇಸರ. ಒಂದು ತ್ರಾಸಿನಲ್ಲಿ ಶಶಿಶೇಖರ, ಗಿರಿಜಾವರ; ಮತ್ತೊಂದು ತ್ರಾಸಿನಲ್ಲಿ ಸುಖಶೇಖರ, ಸುಕೃತಾಕರ. ಧರೆ ಅವರನ್ನು ಪೊಗಳಿತು; ಹೂಮಳೆಸುರಿಯಿತು: ಭೇರಿಯನಾದ ಎಲ್ಲೆಲ್ಲಿಯೂ ತುಂಬಿತು. ಮಂಗಳ ವಾದ್ಯಗಳು ಭೋರ್ಗರೆದುವು. ಹೊಸ ಹೊಸ ವಿಮಾನಗಳಲ್ಲಿ ದೇವಗಣವೇ ಬಂದಿತು. ಆಗ ನಂದಿಯನ್ನು ಕುರಿತು “ ಈ ಅಮರನೀತಿಗೆ ಸಮನಾದ ಭಕ್ತನು ಇನ್ನೆಲ್ಲಿ ಬರಬೇಕು ? ನನಗೆ ಸಮತೂಕವಾಗಿ ನಿಂತಿದ್ದಾನೆ. ಇವನಂತೆ ಸತಿಸುತರನ್ನು ತೂಗಿಕೊಟ್ಟವನು ಬೇರೆ ಯಾರಿದ್ದಾರೆ ? ಇಳೆಗೇ ಪಟ್ಟಾವಳಿಯನ್ನು ಉಡಿಸಿ ಪೂಜೆ ಮಾಡಿದ್ದಾನೆ. ನನ್ನ ತೂಕಕ್ಕೆ ಸರಿಯಾಗಿದ್ದಾನೆ. ” ಎಂದು ಬಹಳವಾಗಿ ಹೊಗಳಿದನು; ಅಮರನೀತಿಯನ್ನು ದೇವನು ತನ್ನ ಗಣವೃಂದಕ್ಕೆ ತೋರಿಸಿದನು; ಪ್ರಯಾಣಕ್ಕೆ ವಿಮಾನವನ್ನು ನಿವಾರಿಸಿ ಆ ತ್ರಾಸಿನಲ್ಲಿಯೇ ಇಬ್ಬರೂ ಕೈಲಾಸಕ್ಕೆ ಪ್ರಯಾಣ ಮಾಡಿದರು ಕೈಲಾಸವು ಗುಡಿತೋರಣಗಳಿಂದ ಅಲಂಕೃತವಾಯಿತು. ಅಮರನೀತಿಗೂ ಅವನ ಸತಿಸುತರಿಗೂ ಗಣಪದವಿಯನ್ನು ಕೊಟ್ಟನು; ಗಿರಿಜೆಗೆ ಅವರನ್ನೆಲ್ಲಾ ತೋರಿಸಿ ಆನಂದಪಡುತ್ತಿದ್ದನು

## ೪. ಬಾಣ

ಹಿಂದಿನ ಕಾಲದಲ್ಲಿ ಕಂಧಾರವೆಂಬ ಒಂದು ಪಟ್ಟಣವಿತ್ತು; ನಂದನೆಂಬ ರಾಜನು ಅಲ್ಲಿ ರಾಜ್ಯವಾಳುತ್ತಿದ್ದನು. ಅವನ ಆಸ್ಥಾನದಲ್ಲಿ ಬಾಣ, ಮಯೂರ, ಕಾಲಿದಾಸ - ಎಂಬ ಮೂವರು ಪ್ರಸಿದ್ಧ ವಿದ್ವಾಂಸರಿದ್ದರು. ಅವರಲ್ಲಿ ಶಿವಭಕ್ತಿನಿಸ್ಸೀಮರಾದ ಬಾಣ-ಕಾಲಿದಾಸರು ಒಂದಾಗಿ ಮಯೂರ ನೊಡನೆ ಮತ್ಸರವನ್ನು ತಾಳಿದರು. ನಂದನ ಓಲಗದಲ್ಲಿ ಇವರಿಬ್ಬರೂ ಒಂದುದಿನ ಕವಿತೋತ್ಸಾಹದಲ್ಲಿದ್ದರು. ಆಗ ನಂದನನ್ನು ಏಕಾಂತದಲ್ಲಿ ಸಂಧಿಸಿ "ದೇವ, ಮಯೂರನನ್ನು ತಾವು ಇಲ್ಲಿ ಸೇರಿಸದಿರೋಣವಾಗಲಿ; ಅವನ ಶರೀರದಲ್ಲಿ ದುರ್ವರ್ಣವಿದೆ" ಎಂದು ನುಡಿದರು. ಅದರಿಂದ ರಾಜನಿಗೆ ಆಶ್ಚರ್ಯವಾಯಿತು; ಅದನ್ನು ಪರೀಕ್ಷಿಸಬೇಕೆಂದು ರಾಜನು ಮಾರನೆಯದಿನ ಓಕುಳಿಯನ್ನು ಏರ್ಪಡಿಸಿದನು. "ನಾಳೆ ವಸಂತೋತ್ಸವ" ಎಂದು ಪುರಜನಕ್ಕೂ ಪರಿಜನಕ್ಕೂ ಸಾರಿಸಿದನು.

ಮಯೂರನಿಗೆ ಇದರ ಗುಟ್ಟು ಹೊಳೆಯಿತು; ಬಾಣ ಕಾಲಿದಾಸರ ಇಂಗಿತವೂ ತಿಳಿಯಿತು. ಅದನ್ನೇ ಕುರಿತು ಚಿಂತಿಸುತ್ತಿರಲು ಸೂರ್ಯಾಸ್ತವೂ ಆಯಿತು. ಕತ್ತಲೆ ಕವಿಯಿತು; ಬೆಳದಿಂಗಳು ಹುಟ್ಟಿತು: ಪೂರ್ವದಿಕ್ಕಿನಲ್ಲಿ ಚಂದ್ರನು ಲೋಕವನ್ನೇ ಬೆಳಗುತ್ತ ಮೇಲಕ್ಕೆ ಬಂದನು. ಹೀಗೆ ರಾತ್ರಿಯು ಚಂದ್ರನಿಂದಲೂ ಚಂದ್ರಿಕೆಯಿಂದಲೂ ಮನೋಹರವಾಗಿತ್ತು.

ಮಯೂರನಿಗೆ ರಾತ್ರಿಯೆಲ್ಲ ನಿದ್ದೆಯಿಲ್ಲ; ಏನುಮಾಡಲಿ ಎಂದು ಚಿಂತಿಸುತ್ತಿದ್ದು "ಸೂರ್ಯನಿಂದ ನನ್ನ ವಿವರ್ಣವನ್ನು ಕಳೆದುಕೊಳ್ಳುತ್ತೇನೆ." ಎಂದು ನಿಶ್ಚಯಿಸಿ ಕೊಂಡನು. ಅಂತೆಯೇ ಬೆಳಗಿನ ಜಾವದಲ್ಲಿ ಎದ್ದು, ಹೊರಟು ಬಂದು ಕಂಠಪ್ರಮಾಣದ ನೀರಿನಲ್ಲಿ ನಿಂತು ಸೂರ್ಯನನ್ನು

ಕುರಿತು ಸೂರ್ಯಶತಕವನ್ನು ಭಕ್ತಿಯಿಂದ ಜಪಿಸಿದನು. ಲೋಕಕ್ಕೆ ಕಣ್ಣಾದ, ಲೋಕವನ್ನೇ ಬೆಳಗುವ ಮಹಾಕಾಂತಿ ಸಂಪನ್ನನಾದ, ತಮಸ್ಸನ್ನು ಓಡಿಸುವ ಆದಿತ್ಯನು ಬಂದು ಸುವರ್ಣಛಾಯೆಯ ಮೈಯನ್ನು ಮಯೂರನಿಗೆ ದಯಪಾಲಿಸಿದನು. ಅನಂತರ ಮಯೂರನು ಮನೆಗೆ ಬಂದು ಸುಖವಾಗಿದ್ದನು.

ಬೆಳಗಾಯಿತು; ರಾಜನು ಪಟ್ಟಣವನ್ನೇ ಬರಮಾಡಿ ಕೊಂಡು ಎಲ್ಲರಿಗೂ ಓಕುಳಿಯ ಕುಪ್ಪಸವನ್ನು ಕೊಟ್ಟನು. ಮಯೂರನಿಗೂ ಒಂದು ಬಂದಿತು. ಎಲ್ಲರೂ ಸಿಂಗರಿಸಿಕೊಳ್ಳಲು ಹೋದರು. ನಡುಹಗಲಿನಲ್ಲಿ ನಂದರಾಜನು, ಚಲುವೆಯರ ತಂಡದೊಡನೆ ಬಂದನು. ಆ ಚಲುವೆಯರು ವಿವಿಧ ರೀತಿಯಲ್ಲಿ ಸಿಂಗರಿಸಿ ಕೊಂಡಿದ್ದರು. ತನ್ನ ಪರಿವಾರಕ್ಕೆ ಕೈಸನ್ನೆ ಮಾಡಿ ಪರಿಮಳಜಲಮಿಶ್ರಿತವಾದ ಓಕುಳಿಯನ್ನು ರಾಜನು ತಾನೇ ಎಲ್ಲರ ಮೇಲೂ ಸುರಿದನು. ಹಾಗೆ ಓಕುಳಿಯಾಡುವಾಗ ಹೇಗೆ ಪಟ್ಟು ಸಿಕ್ಕಿದರೆ ಹಾಗೆಯೇ ಎರಚಾಡುತ್ತಿದ್ದರು ಎಲ್ಲರು. ಹಾಗೆ ಆಡುವಾಗ ನಂದನು ಮಯೂರನನ್ನು ಗುರುತಿಸಿದನು "ಬೆನ್ನೊಡ್ಡು,ಹೊಯ್ ಹೊಯ್" ಎಂದು ಹೇಳಿ ನಂದನು ಮಯೂರನಿಗೆ ಹೊಯ್ದನು. ಮಯೂರನು ಕೆಲಕ್ಕೆ ಸರಿಯದೆ ನಿಂತಿದ್ದುದನ್ನು ನೋಡಿ ರಾಜನು ಅವನ ಬಾಸುಳನ್ನು ನೋಡುವ ನೆವದಿಂದ ಅವನ ಕುಪ್ಪಸವನ್ನು ತೆಗೆಸಿ ನೋಡಿದನು. ಮಯೂರನ ಶರೀರ ಒಳ್ಳೆ ಹೊಂಬಣ್ಣದಿಂದ ಹೊಳೆಯುತ್ತಿತ್ತು. ಸಂಭ್ರಮದಿಂದ ರಾಜನು ಅರಮನೆಗೆ ಹಿಂತಿರುಗಿದನು.

ಬಳಿಕ ರಾಜನು ಬಾಣ ಕಾಲಿದಾಸರನ್ನು ಕರೆಸಿದನು ರಾಜನ ಮನಸ್ಸಿನಲ್ಲಿ ಕೋಪ ಕುದಿಯುತ್ತಿತ್ತು. ಬಾಣನು ಹರುಷದಿಂದ ಆಸ್ಥಾನಕ್ಕೆ ಬಂದನು ರಾಜನು "ಕವಿಗಳೇ, ನೀವು ಹೀಗೆ ಸುಳ್ಳನ್ನು ಹೇಳಬಹುದೆ? ಮಯೂರನ ಮೈ ಹೊಂಬಣ್ಣದ್ದಾಗಿದೆ" ಎಂದು ಹೇಳಿದನು. ಅದಕ್ಕೆ ಬಾಣನು "ಎಲೈ ರಾಜನೆ, ಅವನ ಮೈಯಲ್ಲಿ ದುರ್ವರ್ಣ ಉಂಟು. ಹೋದ ರಾತ್ರಿ ಅವನು ಸೂರ್ಯನಿಂದ ಈ ಬಣ್ಣವನ್ನು ಪಡೆದನು ಎನ್ನಲು ಮಯೂರನು ಅದನ್ನು ಒಪ್ಪಿಕೊಂಡನು. ಆದರೂ ರಾಜನು

ಬಾಣನನ್ನು ಕುರಿತು “ಹೀಗೆ ಮಾಡುವರಾರಿದ್ದಾರೆ? ವಾದಕ್ಕಾಗಿ ಸೂರ್ಯನಿಂದ ಬಣ್ಣ ಪಡೆಯುವುದು ಅಸಾಧ್ಯ” ಎಂದು ಹೇಳಿ ಮೂದಲಿಸಿದನು. ಬಳಿಕ ಬಾಣನು ಕೋಪದಿಂದ “ಶಿವನ ಕರುಣೆಯನ್ನು ಬಲವಾಗಿ ಆಶ್ರಯಿಸಿ ಹಿಂದಿದ್ದುದನ್ನೇ ಇಷನು ಪಡೆದನು; ಇದು ಹೊಸದಲ್ಲ. ಇದಕ್ಕೂ ಹೆಚ್ಚಿನದನ್ನು ಪಡೆಯುವೆನು; ಅಸಾಧ್ಯವಲ್ಲ. ನನ್ನ ಕೈಯನ್ನು ಕತ್ತರಿಸು” ಎಂದು ಹೇಳಿ ಕೈಯನ್ನು ಕತ್ತರಿಸಿ ಕೊಂಡನು ಆ ಕೈಯು ತುಂಡು ಓಲಗದಲ್ಲಿಯೇ ಇತ್ತು. ಬಾಣನು ಶಿವಾಲಯಕ್ಕೆ ಬಂದು ಭಕ್ತರ ನಡುವೆ ರಂಗಮಂಟಪದಲ್ಲಿ ಕುಳಿತು ಹೃತ್ಕಮಲದಲ್ಲಿ ಶಿವನನ್ನು ಧ್ಯಾನಿಸಿ ಸ್ತೋತ್ರ ಮಾಡತೊಡಗಿದನು.

ಶಂಕರನು ಒಂದನ್ನೂ ಕರುಣಿಸದೆ ಸುಮ್ಮನಿದ್ದನು; ಆಗ ಬಾಣನು ತನ್ನ ಸ್ತೋತ್ರವನ್ನು ಮುಂದುವರಿಸಿ “ಅಂಬಿಕಾ ನೈತಂಬ ಬಿಂಬಲಂಪಟಹಸ್ತ” ಎಂದು ಪ್ರಾರಂಭಮಾಡಿದನು. ಅದನ್ನು ಕೇಳಿ ನಸುನಗುತ್ತ ಈಶ್ವರನು ಮೈದೋರಿ “ಬಾಣನೆ, ಹೊಗಳಿಕೆ ಸಾಕು; ಏನು ಬೇಕು” ಎಂದನು. ಆಗ ಬಾಣನು “ನಾಗಭೂಷಣ, ಕರುಣಿಸು” ಎಂದು ಕೈ ಮುಗಿದನು. ಹಾಗೆ ಮುಗಿದ ಕೈ ಕೂಡಲೆ ಚಿಗುರಿತು. ಕೈಯೊಡನೆ ಕಲ್ಪತರುವೇ ಅವನಿಗೆ ಬಂದಿತು. ಕೈಯಿಲ್ಲದೆ ಬಂದವರಿಗೆಲ್ಲ ಕೈಯನ್ನು ಕೊಡಿಸಿದನು. ಶರಣರಿಗೆಲ್ಲ ನಮಸ್ಕಾರ ಮಾಡುತ್ತ, ನಾನಾವಿಧದ ವಾದ್ಯಗಳ ನಡುವೆ ಶಿವನನ್ನು ಹೋಗಳುತ್ತ, ಹಾಡುತ್ತ ಸಂತೋಷದಿಂದಿದ್ದನು.

ನಂದರಾಜನು ಈ ವಿಷಯವನ್ನು ಕೇಳಿ ಕೌತುಕಪಟ್ಟು, ಅಲ್ಲಿಗೆ ಬಂದು ನಮಸ್ಕರಿಸಿ, ಬಾಣನನ್ನು ಆನೆಯ ಮೇಲೆ ಕೂಡಿಸಿ ಪುರದಲ್ಲೆಲ್ಲ ಮೆರವಣಿಗೆ ಮಾಡಿಸಿದನು. ಹರನ ಭಕ್ತಿಭಾವದಿಂದ ಉಬ್ಬಿದನು ಬಾಣನು ಕೆಲವು ಕಾಲ ಶಿವನನ್ನು ಹೊಗಳುತ್ತ ಇರಲು ಸೂರ್ಯ ಪ್ರಕಾಶದ ಒಂದು ವಿಮಾನವು ಬಂತು; ಆ ವಿಮಾನವನ್ನು ಹತ್ತಿ ರಜತಗಿರಿಗೆ ಹೋದನು; ಶಿವನಿಗೆ ನಮಸ್ಕರಿಸಿ ನಿಂದನು. ಆಗ ಶಿವನು ಬಾಣನಿಗೆ ಗಣಪದವಿಯನ್ನು ದಯಪಾಲಿಸಿದನು.

— ❀ —

## ೫. ಉದ್ಭಟ.

ಒಂದೂರಿನಲ್ಲಿ ಒಬ್ಬ ಶಿವಭಕ್ತನಿದ್ದನು. ಅವನ ಹೆಸರು ಉದ್ಭಟ ದೇವ. ಅವನ ಜೀವಿತಾರ್ಥವೇ ಶಿವಧ್ಯಾನವಾಗಿತ್ತು. ಅವನ ಪೂಜೆಯೂ ಹೊಸರೀತಿಯದಾಗಿತ್ತು. ಅವನ ಅವಯವಗಳೇ ಶಿವಪೂಜಾ ಸಾಮಗ್ರಿ ಗಳು; ಇಂದ್ರಿಯಗಳೇ ಪರಿಚಾರಕರು; ಹೃದಯಸರೋಜವೇ ಸೆಜ್ಜೆ ; ನಿರ್ಮಲ ಮನವೇ ಹೂ; ಅವನ ಪ್ರಾಣವೇ ( ಜೀವ ) ಶಿ ವ ಲಿಂ ಗ; ಅಮೃತಾನ್ನವೇ ಪರಿಣಾಮ; ಹೀಗೆ ಹಗಲು ರಾತ್ರಿ ಶಿವನನ್ನು ಪೂಜಿಸು ವನು. ಅವನು ನೋಡುವುದು ಶಿವನನ್ನು ; ಕೂಡುವುದು ಶಿವನೊಡನೆ; ಕೆಲಸ ಮಾಡುವುದು ಶಿವನಸಂಗಡ; ಪ್ರೀತಿಸುವದೂ ಶಿವನನ್ನು. ಅವನು ಹಾಡುವುದೆಲ್ಲ ಶಿವಸ್ತೋತ್ರ; ಮಾಡುವುದೆಲ್ಲ ಪೂಜೆ; ನೆನೆದುದೆಲ್ಲ ಧ್ಯಾನ; ಶರೀರ ವ್ಯಾಪಾರವು ಈಶ್ವರಪರಿರುವನೆಂಬುದಕ್ಕೆ ಅನುಮಾನ. ಹೀಗೆ ಉದ್ಭ ಟನು ಭಕ್ತಿಯ ಎರಕದ ಮೂರ್ತಿ ಯಾದನು; ಅನೇಕ ವಿಧದ ಸಾಮ ರ್ಥ್ಯವನ್ನು ಗಳಿಸಿದನು; ತ್ರಿಕಾಲ ಜ್ಞಾನವನ್ನು ಸಂಪಾದಿಸಿದನು. ಲೋ ಕೈಕ ಪ್ರಭುವಿನ ಸ್ನೇಹ ಮಾಡಿಕೊಂಡನು.

ಹೀಗೆ ಉದ್ಭಟದೇವನಿರಲು, ಅವನ ಹೆಂಡತಿಯೂ ಅ ವ ನಿ ಗೆ ಅನುರೂಪಳಾಗಿದ್ದಳು. ಅವಳಿಗೆ ಶಿವಪೂಜೆಯಲ್ಲಿ ಹೆಚ್ಚು ಸುಖ,ಸಂತೋಷ. ಅವಳು ತನ್ನ ಗಂಡನೊಡನೆ, ಮನಸ್ಸಿನೊಡನೆ ಅವಯವವು ಹೇಗೋ ಹಾಗೆ, ಹೊಂದಿಕೊಂಡಿದ್ದಳು ಅವರಿಬ್ಬರಿಗೂ 'ತನು ಎರಡು ಜೀವ ಒಂದು' ಎಂಬುದು ಚೆನ್ನಾಗಿ ಅನ್ವಯಿಸುತ್ತಿತ್ತು. ಅವಳು ಕಲೆಯಲ್ಲಿಯೂ ನಿಸ್ಸೀ ಮಳು. ಇಂಥ ಹೆಂಡತಿಯೊಡನೆ ಉದ್ಭಟನು ಸುಖವಾಗಿ ಕಾಲಕಳೆಯು ತ್ತಿದ್ದನು.

ಒಂದು ದಿನ ಇಬ್ಬರೂ ಪಗಡೆ ಯಾಡುತ್ತಿದ್ದರು. ಅ ನು ಕೂ ಲ ವಾದ ಗರ ಬಿದ್ದರೆ ಬಹಳ ಉತ್ಸಾಹಿಸುತ್ತಿದ್ದರು. ಹೀಗಿರುವಾಗ ಉದ್ಭಟನು

ನಸುನಕ್ಕನು. ಅದನ್ನು ಕಂಡು ಹೆಂಡತಿ ರೇಗಿದಳು, ಸಂಧ್ದುಳು, ಮುನಿದಳು, ಬಸವಳಿದಳು. ಹಾಸನ್ನು ತೆಗೆದು “ ಆಟ ಚೆನ್ನಾಯ್ತು. ನಿಮ್ಮ ಈ ನಗೆಗೆ ಕಾರಣವೇನು ? ನನ್ನಿಂದ ಅಪಹಾಸ್ಯವಾಯಿತೇ ? ನನ್ನಲ್ಲಿ ಕಂಡ ಕುಂದೇನು ? ನಸುನಕ್ಕುದು ಏತಕ್ಕೆ ? ” ಎಂದು ಬಿರು ನುಡಿದಳು.

“ ಅಂಬುಜಮುಖಿ, ನಿನ್ನ ಕಾರಣದಿಂಡ ನಾನು ನಗಲಿಲ್ಲ. ಸೌರಾಷ್ಟ್ರ ದೇಶದಲ್ಲಿ ಓಹಿಲದೇವನೆಂಬುವನೊಬ್ಬ ಶಿವಭಕ್ತ; ಅವನು ಶಿವನ ಒಲವನ್ನು ಸಂಪಾದಿಸಿ ಶಿವಭಾವವನ್ನು ಹೊಂದಿ ರಜತಗಿರಿಗೆ ನೆಗೆದನು. ಈಶ್ವರನಿಗೆ ಇಷ್ಟವಾದವನು. ಆದರೂ ಪರದೇಶಿಯಂತೆ ಒಬ್ಬನೇ ಹೋದನು; ಅವನ ನಂಟರಿಷ್ಟರು ನೋಡುತ್ತಿದ್ದರು. ಆ ಕಾರಣಕ್ಕಾಗಿ ನಸುನಗುತ್ತಿದ್ದೆನು ” ಎಂದು ಉದ್ಭಟನು ಉತ್ತರ ಕೊಟ್ಟನು.

ಆ ಹಾಸ್ಯದ ನುಡಿಯನ್ನು ಕೇಳಿ ಆ ಕಾಮಿನಿ ನಸುನಗುತ್ತ “ ಕುಳಿತಿದ್ದವರನ್ನೆಲ್ಲ ನೀವು ಕರೆದುಕೊಂಡು ಹೋದರೆ, ಈ ಪಟ್ಟಣ ದೊಡನೆ ನೀವು ಹೋಗುವುದಾದರೆ, ನಿಮ್ಮ ನಗು ಸಾರ್ಥಕ. ಒಳ್ಳೆಯವರನ್ನೂ ಕುರಿತು ಕೆಟ್ಟ ಮಾತನ್ನಾಡಬಹುದೇ ? ಮಾತಿನಿಂದ ಪ್ರಯೋಜನವೇನು ? ಅದರಂತೆ ಗುಣವನ್ನು ತೋರಿಸ ಬೇಕು. ” ಎಂದಳು.

ಉದ್ಭಟನಿಗೆ ಆ ಮಾತಿನಿಂದ ಕೋಪ ಬಂದು ಮನಸ್ಸಿನಲ್ಲಿ ನೋವು ಆಗಿ “ ಪಟ್ಟಣವನ್ನೇ ಕೊಂಡೊಯ್ಯುತ್ತೇನೆ ಅಸಾಧ್ಯವಾವುದು ? ಪ್ರಪಂಚವೇ ಆಶ್ಚರ್ಯ ಪಡುವಂತೆ ಕೊಂಡೊಯ್ಯುತ್ತೇನೆ ; ನಾಡಿದ್ದು ಸೋಮವಾರ ಹೋಗುವೆನು ” ಎಂದು ಘುಡುಘುಡಿಸಿದನು.

ಆ ಮಾನಿನಿ ಮತ್ತೂ ಅಣಕವಾಡಿದಳು. ಉದ್ಭಟನು ಮತ್ತೆ ಮತ್ತೆ ತನ್ನ ನಿಶ್ಚಯವನ್ನೇ ನುಡಿದನು. ಜನರೆಲ್ಲರೂ “ ಉದ್ಭಟನು ನಿಜವಾಗಿಯೂ ಕರೆದುಕೊಂಡು ಹೋಗುವನು; ಅವನನ್ನು ನಾವು ಅರಿಯೆವೇ ” ಎಂದು ಮಾತನಾಡಿ ಕೊಳ್ಳುತ್ತ ದಿಕ್ಕು ದಿಕ್ಕಿನಲ್ಲಿಯೂ ಇರುವ

ತಮ್ಮವರನ್ನು ಬರಮಾಡಿಕೊಂಡರು; ಈ ವಿಷಯವನ್ನು ಸಾರಿಸಿದರು. ದಿಕ್ಕು ದಿಕ್ಕಿಗೂ ಜನರನ್ನು ಅಟ್ಟಿದರು. ಉದ್ಭಟನ ಹೆಂಡತಿಯ ಸಂಭ್ರಮ ಹೇಳತೀರದು. ಅವಳ ಸಂಭ್ರಮ ಹೆಚ್ಚಿದಂತೆಲ್ಲ ಉದ್ಭಟನು ಉಬ್ಬುತ್ತಿದ್ದನು. ಜನರೆಲ್ಲರೂ ಶಿವಗಣಪದವಿಯನ್ನು ಬಯಸಿ ಆ ಪಟ್ಟಣದಲ್ಲಿ ಕಿಕ್ಕಿರಿದರು; ಪಾಪಿಗಳೂ ಪುಣ್ಯವಂತರೂ, ತಾಪತ್ರಯಾತ್ಮಕರೂ ಬಂದು ಸೇರಿದರು. ಆ ಪಟ್ಟಣದಲ್ಲಿ ಎಲ್ಲೆಲ್ಲೂ ಜನರೇ.

ಆ ಮಾನಿನಿಯು ತನ್ನ ಮಾತನ್ನೇ ಚಿಂತಿಸುತ್ತ "ಕರೆದು ಕೊಂಡು ಹೋದರೆ, ಕೈಲಾಸವನ್ನು ಸೇರುವೆನು; ಪಾಪಗಳನ್ನು ನೀಗಿಕೊಳ್ಳುವೆನು; ಇಲ್ಲದಿದ್ದರೆ, ಭಕ್ತನನ್ನು ಭಂಗಿಸುವೆನು. ಎರಡು ವಿಧದಲ್ಲಿಯೂ ನನಗೆ ಒಳ್ಳೆಯದು ಹರಭಕ್ತನಿಗಾದರೆ ಅಸಾಧ್ಯ ಕಾರ್ಯ". ಎಂದುಕೊಳ್ಳುತ್ತ ಉದ್ಭಟನಲ್ಲಿಗೆ ಬಂದಳು. "ವಾರ ಬಂದಿತು; ಜನ ನಿಂತಿದೆ; ತಡಮಾಡದೆ ಕರೆದುಕೊಂಡು ಹೋಗುವುದು" ಎಂದು ಹೇಳಿದಳು

ಉದ್ಭಟನು ಏಕ ಮನಸ್ಸಿನಿಂದ ಶಿವಾಲಯಕ್ಕೆ ಬಂದನು. ಭಸ್ಮೋದ್ಧೂಳನ ಮಾಡಿಕೊಂಡು ರುದ್ರಾಕ್ಷಿಯಿಂದ ಅಲಂಕರಿಸಿ ಕೊಂಡನು. ಅನಂತರ ಅವನು ಶಿವನನ್ನು ಮನಸ್ಸಿನಲ್ಲಿ ಸೆರೆಹಿಡಿದು ಶಿವಲಿಂಗಕ್ಕೆ ಅಭಿಷೇಕ ಮಾಡಿದನು; ಪರಿಮಳಪುಷ್ಪ ಗಂಧಗಳಿಂದ ಪೂಜಿಸಿದನು. ಧೂಪಾರತಿಗಳನ್ನು ಎತ್ತಿದನು; ಪ್ರೀತಿಯಿಂದ ನೈವೇದ್ಯಮಾಡಿ ತಾಂಬೂಲವನ್ನು ಸಮರ್ಪಿಸಿ ಕುಳಿತುಕೊಂಡನು. ಬಳಿಕ ಅವನು ಚಿತ್ತದಲ್ಲಿ ಶಿವನನ್ನು ಧ್ಯಾನಿಸಿ, ಅವನ ಲೀಲೆಗಳನ್ನು ನೆನೆಸಿಕೊಂಡು, ಆನಂದದಿಂದ ರೋಮಾಂಚಹೊಂದಿದನು; ಆನಂದಾಶ್ರು ಹರಿಯತೊಡಗಿತು ಉದ್ಭಟನು ಒಂದೊಂದೇ ಪದ್ಯವನ್ನು ಹಾಡಿ ಮೃಡನವರ್ಣನೆ ಮಾಡುತ್ತಿದ್ದನು.

ನರಲೋಕಕ್ಕೆ ಆಶ್ಚರ್ಯ! ಆ ಪಟ್ಟಣವು ಮೇಲೇಳಲಾರಂಭಿಸಿತು; ಒಂದೊಂದು ಪದ್ಯಕ್ಕೆ ನೂರು ಯೋಜನದಂತೆ ನೆಗೆಯುತ್ತಿತ್ತು,

ಆ ಪಟ್ಟಣಿಗರಿಗೆ ಅದರ ಅರಿವಿಲ್ಲ ಇತರರು ಇದನ್ನು ನೋಡಿ ಬೆರಗು ಪಡೆದರು. ಆ ಪಟ್ಟಣ ಒಂದು ಹರಿಗೋಲಿನಂತಿತ್ತು; ಪುರಜನರು ಹರಿಗೋಲನ್ನೇರಿದವರಂತಿದ್ದರು; ಆಕಾಶವು ಭವಸಾಗರ ದಂತಿತ್ತು; ಉದ್ಭಟನು ಅಂಬಿಗ ನಂತಿದ್ದನು ಉದ್ಭಟನು ಶಿವನನ್ನು ಜಡೆಯಿಂದ ಚರಣದ ವರೆಗೂ ವರ್ಣಿಸಿ ನೂರು ಪದ್ಯಗಳನ್ನು ರಚಿಸಿದನು. ಉದ್ಭಟನ ಹೆಂಡತಿ ತಾನು ಮೇಲೇರುತ್ತಿರುವುದನ್ನೂ ಅರಿಯದೆ, ಅವನ ಭಕ್ತಿಯನ್ನು ತಿಳಿಯದೆ "ಉದ್ಭಟ, ಮಧ್ಯಾಹ್ನವಾಯಿತು; ನಿನ್ನ ಮಾತು ಹೋಯಿತು;" ಎಂದಳು, ಅದಕ್ಕೆ ಉದ್ಭಟನು ನಸುನಗುತ್ತ "ಮೇಲೆ ನೋಡು; ಸೂರ್ಯನು ಏರಿದ ಹೊತ್ತನ್ನು ನೋಡು" ಎಂದನು.

ಆ ಕಾಮಿನಿ ಮೇಲೆ ನೋಡಿದಳು; ರಜತಾಚಲದ ವಿಶಾಲ ವೈಭವವು ರವಿಶಶಿ ಕೋಟಿಗಳನ್ನು ಹೀಯಾಳಿಸುತ್ತಿತ್ತು. ಅದನ್ನು ನೋಡಲಾರದೆ ಕಣ್ಣು ಮುಚ್ಚಿದಳು; ಉದ್ಭಟ ದೇವನಿಗೆ ನಮಸ್ಕರಿಸಿದನು. ಅವಳು ಆನಂದದ ರಸದಲ್ಲಿ ಮುಳುಗಿದಳು, ಆ ಪುರವು ಸುರಗಿರಿಯನ್ನು ಮೀರಿ ಕೈಲಾಸದ ದ್ವಾರದಲ್ಲಿ ಬಂದು ನಿಂತಿತು. ಉದ್ಭಟನು ಕರುಣಾಂಭೋಧಿಯಾದ ಇಂದುಧರನಲ್ಲಿಗೆ ಬಂದು ಮೊಯ್ಯಿಕ್ಕಿದನು. ಅವನನ್ನು ಶಿವನು ನೋಡಿ ಆನಂದದಿಂದ ನಂದೀಶನಿಗೆ ತೋರಿಸುತ್ತ "ಇವನಂತೆ ಪುರಸಹಿತ ನಡೆತಂದ ಮಹಾಭಕ್ತರುಂಟೇ? ಹೆಂಡತಿಯ ಮಾತನ್ನು ನಡೆಸಿದವರುಂಟೇ? ಎಂದು ಉದ್ಭಟನನ್ನು ಕೊಂಡಾಡುತ್ತ ಬಿಗಿದಪ್ಪಿದನು; ಅವನಿಗೆ ಗಣಪದವಿ ಯಿತ್ತನು. ಶಿವನು ಆ ಪಟ್ಟಣವನ್ನು ಕೈಲಾಸದಲ್ಲಿ ಇರಿಸುತ್ತ ಪುರಜನರಿಗೆಲ್ಲ ದಯೆತೋರಿದನು.

## ೬. ಹಲಾಯುಧ ದೇವ

ಉತ್ತರ ದೇಶದಲ್ಲಿ ನವಗ್ರಾಮವೆಂಬ ಒಂದು ಪಟ್ಟಣವಿತ್ತು. ಅಲ್ಲಿ ಒಬ್ಬ ಶಿವಭಕ್ತನಿದ್ದನು. ಅವನ ಹೆಸರು ಹಲಾಯುಧ. ಅವನು ಪ್ರತಿನಿತ್ಯವೂ ಶಿವಾಲಯಕ್ಕೆ ಹೋಗಿ, ಮೃಡ ಮೂರ್ತಿಗೆ ಕೈಮುಗಿದು, ಅಪ್ಪಿ ಮುದ್ದಾಡಿ, ರೋಮಾಂಚ ಪಡೆಯುತ್ತಿದ್ದನು ಸಂತೋಷದಿಂದ, ಅನಂತರ ಶಿವನಿಗೆ ಅಭಿಷೇಕ ಮಾಡಿ, ಧೂಪ ದೀಪ ನೈವೇದ್ಯಾದಿಗಳಿಂದ ಉಪಚರಿಸಿ, ಗದ್ಯ ಪದ್ಯಗಳ ರೂಪದಲ್ಲಿ ಹೊಸ ಕಾವ್ಯವನ್ನೇ ರಚಿಸಿ, ಸ್ತುತಿಸಿ, ಶಿವ ಸೇವೆಯಿಂದ ಸಂತೋಷವನ್ನು ಪಡೆಯುತ್ತಿದ್ದನು.

ಹೀಗಿರಲು ಅವನ ಗ್ರಾಮದ ಮುಖ್ಯಸ್ಥರೆಲ್ಲರೂ ಅವನನ್ನು ಹರುಷದಿಂದ ಕೊಂಡಾಡುತ್ತಿದ್ದರು. ಆ ನವಗ್ರಾಮಕ್ಕೆಲ್ಲ ಹಲಾಯುಧನೊಬ್ಬ ಸತ್ಪುರುಷ; ಎಲ್ಲರಿಗೂ ಶಿವಭಕ್ತಿಯನ್ನು ಹುಟ್ಟಿಸಿ ಶಿವಪೂಜಕರನ್ನಾಗಿ ಮಾಡಿದನು. ಎಲ್ಲರೂ ಹಣೆಗೆ ವಿಭೂತಿಯನ್ನು ಧರಿಸಿ, ರುದ್ರಾಕ್ಷಿ ಮಾಲೆಯನ್ನು ಧರಿಸಿ, ಪಂಚಾಕ್ಷರಿಯನ್ನು ಜಪಿಸುತ್ತ, ಶಿವಕಥೆಯನ್ನು ಕೇಳುತ್ತ, ಶಿವನನ್ನು ಧ್ಯಾನಿಸುತ್ತ ಕಾಲಕಳೆಯುತ್ತಿದ್ದರು. ಇಷ್ಟೆಲ್ಲ ಹಲಾಯುಧನ ಮೇರೆಯರಿಯದ ಶಿವಭಕ್ತಿಯಿಂದ ಆಯಿತು.

ಒಂದು ದಿನ ನವಗ್ರಾಮದ ಮುಖ್ಯಸ್ಥರೆಲ್ಲರೂ ಒಂದು ಊರಿಗೆ ಬಂದರು; ಹಲಾಯುಧ ಮತ್ತು ಇತರ ಭಕ್ತರೆಲ್ಲರೂ ಶಿವಗೋಷ್ಠಿಯನ್ನು ನೆರೆಸಿದರು. ಎಲ್ಲೆಲ್ಲೂ ಆನಂದವು ತುಂಬಿತ್ತು. ಮಾತಿಗೆ ಮಾತು ಬೆಳೆದು ಶ್ರೇಷ್ಠ ಹರಭಕ್ತರ ಪ್ರಸಂಗ ಬಂತು "ಓಹಿಲಯ್ಯನು ಸಶರೀರನಾಗಿ ಕೈಲಾಸಕ್ಕೆ ಹೋದುದನ್ನು ನೋಡಿ, ನಕ್ಕು, ಪುರ ಸಹಿತವಾಗಿ ಉದ್ಭಟನು ಕೈಲಾಸಕ್ಕೆ ಹೋದನು; ಈ ಅದ್ಭುತ ಕಾರ್ಯ ಉಳಿದವರಿಗೆ ಸಾಧ್ಯವೇ ? ಎಂಬ ಮಾತು ಹೊರಟಿತು.

ಆಗ ಹಲಾಯುಧನು ಉಬ್ಬಸಗೊಂಡು ಬಹಳ ಹುರುಡಿನಿಂದ

"ಶಿವನ ಒಲವೊಂದಿರಲು ಯಾವುದು ತಾನೆ ಅಸಾಧ್ಯ? ಪುರವನ್ನು, ಕರೆದುಕೊಂಡು ಹೋಗುವುದು ದೊಡ್ಡದೆ? ಶಿವಕರುಣೆ ಇದ್ದರೆ ಇವೆಲ್ಲ ಅಸಾಧ್ಯವೇ ?" ಎಂದನು.

ಆ ಮಾತನ್ನು ಕೇಳಿದ ಗೌಡರು "ಹಲಾಯುಧ! ಉದ್ಭಟನನ್ನು ಆಡಿಕೊಳ್ಳುವೆ. ನೀನು ಸದ್ಭಕ್ತ; ಇಂತು ಆಡಿಕೊಳ್ಳುವವರು ಶ್ರೇಷ್ಠರು, ಆದ್ದರಿಂದ ನೀನು ಈಶ್ವರನಲ್ಲಿಗೆ ಒಬ್ಬನೆ ಹೋಗುವುದೇ? ನಮ್ಮ ಈ ನವಗ್ರಾಮವನ್ನೂ ತೆಗೆದುಕೊಂಡು ಹೋಗಿ ಶಿವನ ಮುಂದೆ ಇರಿಸುವೆಯಲ್ಲವೇ?" ಎಂದು ಹಲಾಯುಧನನ್ನು ಕುರಿತು ವ್ಯಂಗ್ಯೋಕ್ತಿಯನ್ನಾಡಿದರು.

ಹಲಾಯುಧನು ಆ ಕಟಕಿ ನುಡಿಯನ್ನು ಕೇಳಿ, ಉಬ್ಬಿ, ಸಭೆಯಲ್ಲಿ ಈ ರೀತಿ ಮಾತು ಕೊಟ್ಟನು. – "ಇದು ನಿಮ್ಮ ಮಾತಲ್ಲ; ಶಿವ ಪ್ರೇರಣೆ. ನೀವು ಹೇಳಿದ ರೀತಿಯಲ್ಲಿ ಹೋಗುತ್ತೇನೆ. ಉದ್ಭಟನು ಒಂದು ಪುರವನ್ನು ಕೊಂಡು ಹೋದನು; ನಾನು ಈ ನವಗ್ರಾಮದೊಡನೆ ಹೋಗುವೆನು; ಆಶ್ಚರ್ಯವನ್ನೇ ಎಸಗುತ್ತೇನೆ. ಈ ಕಟಕಿನುಡಿ ನಮಗಲ್ಲ ಈ ಮಾತನ್ನು ಡಂಗುರ ಹೊಡೆದು ಸಾರಿ"

ಹಲಾಯುಧನು ಭೂಮಿ ನಡುಗುವಂತೆ ಡಂಗುರ ಹೊಡೆಸಿ, ಆ ದಿನ ಶಿವರಾತ್ರಿಯನ್ನು ಆಚರಿಸಿದನು. ಬೆಳಿಗ್ಗೆ ಭಸ್ಮೋದ್ಧೂಳನ ಮಾಡಿಕೊಂಡು ದೇವಾಲಯಕ್ಕೆ ಬಂದನು; "ಶಂಕರಾ, ಶಶಿಧರಾ, ಇಂದೆನಗೆ ಕರುಣಿಪುದು, ಗಿರಿಜಾ ಮನೋಹರಾ" ಎಂದು ಮುಕ್ತವಾಗಿ ಭಕ್ತಿಯಿಂದ ಹಾಡುತ್ತ ಶಿವನನ್ನು ಸ್ತೋತ್ರ ಮಾಡಲಾರಂಭಿಸಿದನು. ನವಗ್ರಾಮವೂ ಆಕಾಶಕ್ಕೆ ಎದ್ದಿತು; ನೆಗೆಯಿತು. ಈ ಅದ್ಭುತಕ್ಕೆ ಪುಷ್ಪ ವೃಷ್ಟಿಯಾಯಿತು. ದೇವ ದುಂದುಭಿಗಳು ಮೊಳಗಿದವು. ಲೋಕವೆಲ್ಲ ಆಶ್ಚರ್ಯದಿಂದ "ಸುಖ ಗೋಷ್ಠಿಯಲ್ಲಿ ಮಾತಿಗೆ ಮಾತು ಬರುವುದೆಲ್ಲಿ? ಒಂಬತ್ತು

ಗ್ರಾಮ ಕೈಲಾಸಕ್ಕೆ ಹೋಗುವುದೆಲ್ಲಿ? ಉದ್ಭಟನೊಡನೆ ಒಂದು ಗ್ರಾಮವು ಹೋದರೆ, ಇವನೊಡನೆ ಒಂಬತ್ತು ಗ್ರಾಮ ಹೋಯಿತು. ಹಲಾಯುಧನ ಭಾಷೆಯೇ ಭಾಷೆ; ಭಕ್ತಿಯೇ ಭಕ್ತಿ" ಎಂದು ಕೊಂಡಾಡಿತು.

ನವಗ್ರಾಮವು ಇಂದ್ರಲೋಕ, ಚಂದ್ರಲೋಕ, ಸೂರ್ಯಲೋಕ, ನಕ್ಷತ್ರಲೋಕ ಮೊದಲಾದವುಗಳನೆಲ್ಲ ದಾಟಿ ಸತ್ಯಲೋಕಕ್ಕೆ ಬಂದಿತು. ಶಿವನು ನಂದೀಶ್ವರನ ಬಾಗಿಲ ವರೆಗೆ ಬಂದು ನಿಂತಿದ್ದನು. ದೇವನನ್ನು ನೋಡಿ ಹಲಾಯುಧನು ಸಂಭ್ರಮದಿಂದ ಅವನ ಪಾದಗಳಲ್ಲಿ ಬಿದ್ದು ನಮಸ್ಕರಿಸಿದನು ಶಂಕರನು ಅವನನ್ನು ಗಣಕುಲಕ್ಕೆಲ್ಲ ತೋರಿಸಿ, ನಂದೀಶ ನನ್ನು ಕುರಿತು ಏಕ ನಿಷ್ಠೆಯ ಭಕ್ತನನ್ನು ನೋಡಯ್ಯ. ಮಾತಿಗೆ ಮಾತು ಬೆಳೆದು ಒಂಬತ್ತು ಗ್ರಾಮವನ್ನೂ ಕರೆತಂದ ಭಕ್ತರಿದ್ದಾರೆಯೆ? ನನ್ನ ಭಕ್ತರಿಗೆ ಮೂದಲಿಸುವ ಮಾತು ಸೈರಿಸುವುದಿಲ್ಲ ಮರೆ - ಮೋಸ ಗಳೆಂದರೆ ಅವರಿಗೆ ಆಗದು. ನವವಿಧ ಪೂಜೆ, ನವನವಪ್ರೇಮ, ನವರ ಸಾನ್ನ, ನವಭಕ್ತಿ - ಇವೇ ನವ ಗ್ರಾಮದ ಹಲಾಯುಧ. "ಎಂದು ಹೇಳಿ ಹಲಾಯುಧನನ್ನು ಕಟ್ಟಿಕೊಂಡು ತಕ್ಕೈಸಿ ಗಣಪದವಿಯನ್ನು ಕೊಟ್ಟನು; ನವಗ್ರಾಮವನ್ನು ರುದ್ರಲೋಕದಲ್ಲಿ ಇರಿಸಿದನು.

## ೭. ಮಳೆಯ ರಾಜ

೧

ಮಳೆಯವತಿ ಎಂಬ ಪಟ್ಟಣ ಮಳೆಯ ದೇಶದ ರಾಜಧಾನಿ. ಅಲ್ಲಿ ದೇವರಾಜನೆಂಬ ರಾಜನಿದ್ದನು. ಅವನ ಹೆಂಡತಿಯ ಹೆಸರು ಶಚಿ. ಅವನು ಶೌರ್ಯ, ಸಂಪತ್ತು ಎಲ್ಲದರಲ್ಲಿಯೂ ಭೂಲೋಕದ ದೇವರಾಜನೇ ಆಗಿದ್ದನು. ಅವನ ಗಜತುರಂಗ ರಥ ಪದಾತಿಗಳು ಅಸಂಖ್ಯಾತವಾಗಿದ್ದುವು; ಕುಬೇರನ ಐಶ್ವರ್ಯಕ್ಕೂ ಮಿಗಿಲಾದ ಐಶ್ವರ್ಯ ಅವನದು.

ಅವನು ಪ್ರತಿನಿತ್ಯವೂ ಪರಿಮಳೋದಕದಿಂದ ಶಿವನಿಗೆ ಅಭಿಷೇಕ ಮಾಡುತ್ತಿದ್ದನು; ಹೊಸ ಹೂ ಗಳಿಂದ ಪೂಜಿಸಿ ಧೂಪ ದೀಪ ನೈವೇದ್ಯ ತಾಂಬೂಲಗಳನ್ನು ಭಕ್ತಿಯಿಂದ ಸಮರ್ಪಿಸುತ್ತಿದ್ದನು. ಅನಂತರ ಮುತ್ತು ಮಾಣಿಕ್ಯ ಗಳಿಂದ ಅಲಂಕರಿಸಿ, ನೋಡಿ ಆನಂದ ಪಡುತ್ತಿದ್ದನು.

ಅವನ ದೇಶದಲ್ಲಿ ಒಂದೇ ಸಮನಾದ ವಸಂತ; ಒಂದೇ ಸಮನಾದ ಸುವೃಷ್ಟಿ; ಒಂದೇ ಸಮನಾದ ವಿವಾಹಾದಿ ಮಂಗಳ ಕಾರ್ಯಗಳು. ಎಲ್ಲರೂ ಸುಜನರೆ; ದಾನಿಗಳೇ; ಒಡೆಯರೇ; ಜಾಣರೆ; ಸತ್ಯರೆ; ಪುಣ್ಯವಂತರೇ; ಭಕ್ತರೇ; ಎಲ್ಲೆಲ್ಲೂ ಕ್ಷೇಮವೇ ಹೀಗೆ ಸಮೃದ್ಧವಾದ ದೇಶವನ್ನು ದೇವರಾಜನು ಅನೇಕ ವರ್ಷಗಳು ಸುಖದಿಂದ ಆಳುತ್ತಿದ್ದನು.

ಹೀಗಿರುತ್ತಿರಲು, ಒಂದುದಿನ ರಾಜನು ಪುರಾಣವನ್ನು ಕೇಳುತ್ತಿದ್ದಾಗ "ಪುತ್ರನಿಲ್ಲದವನಿಗೆ ಪರಲೋಕವಿಲ್ಲ" ಎಂಬ ಮಾತನ್ನ ಕೇಳಿದನು. ಅದರಿಂದ ಅವನಿಗೆ ಮನಸ್ಸಿನಲ್ಲಿ ಮಗನ ಬಯಕೆ ಮೊಳೆಯಿತು. ಶಿವನಿಂದ ಮಗನನ್ನು ಪಡೆಯುವೆ ನೆಂದು ನಿಶ್ಚಯಿಸಿ ಶಿವಚತುರ್ದಶಿಯ ದಿನ ಶಿವಾಲಯಕ್ಕೆ ಹೋದನು ದೇವರಾಜ. ತನ್ನ ಹೆಂಡತಿಯನ್ನು ಅಲ್ಲಿಗೆ ಬರಮಾಡಿಕೊಂಡು ಇಬ್ಬರೂ ಶುಚಿಭೂರ್ತರಾಗಿ ಭಕ್ತಿಯಿಂದ ಶಂಕರನನ್ನು ಪೂಜಿಸಿದರು; ಭಕ್ತರಿಗೆ ರತ್ನಾಭರಣ ಸುವಸ್ತ್ರಗಳನ್ನು ದಾನಮಾಡಿ

ತರು, ರಾಜಪುತ್ರರು ಇವರನ್ನೆಲ್ಲ ಕಳಿಸಿಕೊಟ್ಟು ಅಂತ:ಪುರಕ್ಕೆ ಬಂದನು. ಅಲ್ಲಿ ಸಿಂಹಾಸನದಲ್ಲಿ ಕುಳಿತು, ಮಗುವಿನ ವಿಷಯವನ್ನು ಕೇಳಿದನು. ಆಗ ದಾದಿಯರು ಮಗು ಶಿವಪ್ರಸಾದವಾದ ನವನೀತವನ್ನೂ ಮೊಲೆ ಹಾಲನ್ನೂ ಸವಿದು ಶಿವಧ್ಯಾನವೆಂಬಂತೆ ನಿದ್ರಾಮುದ್ರೆಯಿಂದಿರುವುದನ್ನು ಬಿನ್ನವಿಸಿಕೊಂಡರು. ಬಳಿಕ ರಾಜನೂ ರಾಣಿಯೂ ಸ್ನೇಹದಿಂದ ಪುತ್ರನನ್ನು ನೋಡಿ ನೋಡಿ ಮುದ್ದಾಡಿ. ಅಪ್ಪಿಕೊಂಡು ಸಂತೋಷ ಪಟ್ಟರು.

ಅಂತು ಮಳೆಯರಾಜನು ಕಲ್ಪವೃಕ್ಷದ ಮೊಳಕೆಯಂತೆಯೂ, ಪುಣ್ಯದ ಚಿಗುರಿನಂತೆಯೂ, ಭಕ್ತಿಯ ಹೂವಿನಂತೆಯೂ, ಮುಕ್ತಿಯ ಹಣ್ಣಿನಂತೆಯೂ, ಬಾಲಚಂದ್ರನಂತೆಯೂ, ಕಲಹಂಸನಂತೆಯೂ ಪರುಷದ ಮರಿಯಂತೆಯೂ, ಕಾಮಧೇನುವಿನ ಕರುವಿನಂತೆಯೂ, ಬೆಳೆಯುತ್ತಿದ್ದನು; ವಿಧ ವಿಧವಾದ, ಬಾಲಲೀಲೆಗಳನ್ನು ತೋರಿಸುತ್ತಿದ್ದನು; ತಂದೆ ತಾಯಿಗಳನ್ನು ಸಂತೋಷಪಡಿಸುತ್ತಿದ್ದನು, ಕಾಲಕ್ರಮದಲ್ಲಿ ಮಳೆಯರಾಜನು ಬಾಲ್ಯವನ್ನು ಕಳೆದು ಕೌಮಾರ್ಯದಲ್ಲಿ ದಿವ್ಯ ವಸ್ತ್ರಾಭರಣಾದಿ ಭೋಗಗಳನ್ನು ಅನುಭವಿಸುತ್ತ, ಶಸ್ತ್ರ ಶಾಸ್ತ್ರ, ಸಾಹಿತ್ಯ ಸಂಗೀತ, ಗಜಾಶ್ವಾರೋಹಣಾದಿ ಸಕಲವಿದ್ಯಾ ಪರಿಣತನಾದನು. ಹೀಗೆಯೇ ಮಳೆಯರಾಜನಿಗೆ ಐದು, ಆರು, ಏಳು, ಎಂಟು, ಹತ್ತು, ಹದಿನೈದು, ವರ್ಷ ವಯಸ್ಸಾಯಿತು.

ವಸಂತ ಮಾಸದ ಒಂದುದಿನ; ರಾಜನು ವೈಹಾಳಿ ವಿನೋದಕ್ಕೆ ಹೋಗೋಣವೆಂದು ಮಂತ್ರಿಗಳಿಗೆ :ಹೇಳಿದನು ಆಗ ರಾಜಕುಮಾರನು ತಾನು ಬರುತ್ತೇನೆಂದು ಮಂತ್ರಿಗಳ ಮೂಲಕ ರಾಜನಿಗೆ ತಿಳಿಯಪಡಿಸಲು, ರಾಜನು ಬಹಳ ಸಂತೋಷದಿಂದ ಒಪ್ಪಿದನು. ರಾಜಪುತ್ರನು ಸಿಂಗರದ ಮನೆಗೆ ಹೋಗಿ ವಿವಿಧ ರೀತಿಯಲ್ಲಿ ಸಿಂಗರವಾದನು. ಸಚಿವ ಪುತ್ರರು ಕೈ ಹಿಡಿದು ಕರೆದು ಕೊಂಡು ಬಂದರು; ರಾಜ ಪುತ್ರನಿಗಾಗಿ

ಉಚ್ಚೈಶ್ರವವನ್ನು ಮೀರಿಸುವ ಒಂದು ಕುದುರೆ ಅಲಂಕೃತವಾಗಿ ಸಿದ್ಧವಾಗಿತ್ತು. ಅದನ್ನು ಹತ್ತಿ ರಾಜಕುಮಾರನು ವಾದ್ಯಘೋಷದ ನಡುವೆ ತನ್ನ ತಂದೆಯು ಕುಳಿತಿದ್ದ ಆನೆಯ ಮಗ್ಗುಲಿಗೆ ಬಂದು ನಿಂತನು. ರಾಜನು ಮುಗುಳು ನಗೆಯನ್ನು ಬೀರಿ, ಹೊರಡಲು ಅನುಮತಿಕೊಟ್ಟನು; ಚತುರಂಗ ಬಲಸಮೇತನಾಗಿ ವೈಹಾಳಿಯ ಮೈದಾನಕ್ಕೆ ಬಂದನು.

ಆಗ ರಾಜನು ಸುತ್ತಲೂ ಆನೆಗಳನ್ನು ನಿಲ್ಲಿಸಿ ತನ್ನ ಮಗನ ಏರಾಟವನ್ನೂ ನೋಡಬೇಕೆಂದು ಬಯಸಿ ರಾಜಪುತ್ರರಿಗೆ ಕೈಬೀಸಿ ಸನ್ನೆಮಾಡಿದನು. ಆಗ ರಾಜಪುತ್ರರೆಲ್ಲರೂ ರಾಜಕುಮಾರನೊಡನೆ ಕಾಳಗಕ್ಕೆ ಮೊದಲು ಮಾಡಿದರು. ಮಳೆಯರಾಜನು ವಿದ್ಯಾಧರನಂತೆಯೂ ಮೇಘವಾಹನನಂತೆಯೂ ರಾಹುತರನ್ನು ಅಟ್ಟಿ, ತಿವಿದು, ರಾಜಪುತ್ರರನ್ನು ಹೊತ್ತು ತಂದ ಕುದುರೆಗಳನ್ನೂ ಎಳೆದಾಡಿ ತನ್ನ ಸಮಕ್ಕೆಯಾರೂ ಇಲ್ಲದಿರಲು, ತಂದೆಯಾದ ದೇವರಾಜನಲ್ಲಿಗೆ ಬಂದು ಎರಗಿದನು. ರಾಜನು ಮಗನನ್ನು ನೋಡಿ ಸಂತೋಷಗೊಂಡು, ತಾನು ಹೊದೆದಿದ್ದ ಪಟ್ಟಾವಳಿಯಿಂದ ದೃಷ್ಟಿತೆಗೆದು ಅದನ್ನು ಎಸೆದನು. ಅನಂತರ ರಾಜನು ತನ್ನ ಕುಮಾರನೊಡನೆ ವೈಹಾಳಿಯನ್ನು ಮುಗಿಸಿ ಅರಮನೆಗೆ ಬಂದು ಅಂತಃಪುರವನ್ನು ಪ್ರವೇಶಿಸಿದನು ರಾಜಪುತ್ರನು ಅಲ್ಲಿ ಒಂದು ಸಿಂಹಾಸನವನ್ನು ಅಲಂಕರಿಸಿದನು; ಮಂಗಳಾಂಗಿಯರು ಆರತಿಯನ್ನು ಮಾಡಿದರು. ರಾಜನೂ ರಾಣಿಯೂ ಮಗನನ್ನು ನೋಡಿ, ನೋಡಿ ಸಂತೋಷಪಟ್ಟರು.

ಅಷ್ಟರಲ್ಲಿಯೇ ಅವರಿಗೆ ಮಗನ ಆಯುಸ್ಸು ನೆನಪಿಗೆಬಂತು; ಮನಸ್ಸಿನ ಸಂತೋಷವೆಲ್ಲ ಕರಗಿ ಮುಖಗಳು ಬಾಡಿದವು. ಇಬ್ಬರಿಗೂ ಶೋಕರಸ ಉಕ್ಕಿ ಕಣ್ಣೀರು ಸುರಿಯಿತು. ಅದನ್ನು ಕಂಡ ಮಳೆಯರಾಜನು ಕೌತುಕಪಟ್ಟು "ಅಮೃತದ ನಡುವೆ ವಿಷ ಹುಟ್ಟಿದಂತೆಯೂ, ಬೆಳಕಿನ ನಡುವೆ ಕತ್ತಲೆಯುಂತೆಯೂ, ಬೆಳದಿಂಗಳಿನಲ್ಲಿ ದಳ್ಳುರಿಯಂತೆಯೂ, ಶಿವ

ಭಕ್ತರ ನುಡಿಯಲ್ಲಿ ಹುಸಿಯುಂಟೆಯೂ, ಇರುವ ನಿಮ್ಮ ಆ ದು:ಖದ ಕಾರಣವನ್ನು ಹೇಳದಿದ್ದರೆ ನಾನು ಊಟಮಾಡೆನು " ಎಂದು ನುಡಿದನು. ಅದಕ್ಕೆ ತಂದೆತಾಯಿಗಳು " ಮಗು, ನೀನು ವರಪುತ್ರ. ಶಿವನು ನಿನಗೆ ಹದಿನಾರು ವಯಸ್ಸನ್ನು ಕೊಟ್ಟಿದ್ದಾನೆ. ಅದರಲ್ಲಿ ಇಂದಿಗೆ ಹದಿನೈದು ವರ್ಷ ತುಂಬಿತು. ಇನ್ನೊಂದು ವರ್ಷಕ್ಕೆ ನಿನಗೆ ನಿರ್ವಾಣ " ಎಂದುಹೇಳಿ ಗೋಳಾಡಿದರು. ಆಗಮುಳಿಯರಾಜನು " ಶಿವನು ಕರುಣಿ ; ನನಗೆ ಸಾವಿಲ್ಲ " ಎಂದು ತಂದೆ ತಾಯಿಯನ್ನು ಸಂತೈಸಿದನು.

ಧೈರ್ಯನಿಧಿಯಾದ ಮುಳಿರಾಯಜನು ತನ್ನ ಆಯುಸ್ಸಿನ ವಿಷಯುವನ್ನೇ ಯೋಚಿಸದೆ ಇದ್ದನು; ರಾಜಕುಮಾರನಿಗೆ ಉಚಿತವಾದ ಭೋಗೋಪಚಾರಗಳನ್ನು ಪಡೆದು ಕಾಲ ಕಳೆಯುತ್ತಿದ್ದನು; ತಂದೆಯಿಂದ ಶೈವೋಪದೇಶ ಸಂಪನ್ನನಾಗಿದ್ದನು. ತಂದೆತಾಯಿಗಳು ಅವನ ಆಯುಸ್ಸು ಇನ್ನು ಆರು ತಿಂಗಳೆಂದೂ, ಮೂರು ತಿಂಗಳೆಂದೂ, ಒಂದುತಿಂಗಳೆಂದೂ, ಏಳು ದಿನ ವೆಂದೂ, ಎಚ್ಚರ ಕೊಟ್ಟರೂ ಮೌನವಾಗಿದ್ದನು. ಕೊನೆಗೆ ಅವನ ನಿರ್ವಾಣದ ದಿನ ಬಂತು. ಅದಕ್ಕೆ ಹಿಂದಿನ ದಿನ ರಾಜಕುಮಾರನು ಸಕಲ ಶಿವಭಕ್ತರನ್ನೂ ಸೇರಿಸಿ ಶಿವರಾತ್ರಿಯನ್ನು ಆಚರಿಸಿದನು. ಮಾರುದಿನ ಬೆಳಗ್ಗೆ ಶುದ್ಧಾಂಗನಾಗಿ, ಭಸಿತೋದ್ಧೂಳನ ಮಾಡಿಕೊಂಡು ರುದ್ರಾಕ್ಷಿಗಳನ್ನು ಧರಿಸಿ ಆ ಪುರದ ಪಕ್ಕದಲ್ಲಿಯೇ ಇದ್ದ ಸ್ವಯಂಭು ಲಿಂಗದ ಸಮೀಪಕ್ಕೆ ಬಂದನು. ಕಮಲ ಮುಕುಳಗಳನ್ನು ತನ್ನ ಇಬ್ಬರು ಇಷ್ಟರಿಂದ ತರಿಸಿದನು. ತಾನೇ ನದಿಯಿಂದ ಅಘೋರ್ಯೋದಕವನ್ನು ತಂದನು; ಶಿವನಿಗೆ ಸಹಸ್ರಾಭಿಷೇಕವನ್ನು ಮಾಡಿ, ಚಂದನ ಲೇಪನ, ಧೂಪ, ದೀಪ, ನೈವೇದ್ಯ, ಮೊದಲಾದವುಗಳನ್ನು ಸಮರ್ಪಿಸಿದನು. ಅನಂತರ ಶಿವನಿಗೆ ಭಕ್ತಿಯಿಂದ ನಮಸ್ಕರಿಸಿ ಶುದ್ಧ ಮನಸ್ಸಿನಿಂದ ಒಂದೊಂದೆ ಕಮಲ ಮುಕುಳವನ್ನು ಅರ್ಪಿಸುತ್ತ ಭಕ್ತಿಯಿಂದ ಸ್ತುತಿಸುತ್ತಿದ್ದನು,

೩

ಮಳೆಯರಾಜನು ಶಿವನನ್ನು ಭಕ್ತಿಯಿಂದ ಸ್ತುತಿಸಲು, ಪಂಚವದನನು ಪ್ರತ್ಯಕ್ಷನಾದನು; ಹುಲಿಯ ಚರ್ಮವನ್ನು ಉಟ್ಟು, ಆನೆಯ ಚರ್ಮವನ್ನು ಹೊದೆದು, ನಾಗಾಭರಣವನ್ನು ಧರಿಸಿ ಸುರುಚಿರ ಪ್ರಕಾಶಮಾನ ನಾದ ಪರಮೇಶ್ವರನು ಮೈದೋರಿದನು; ತನ್ನ ಪಾದಗಳಲ್ಲಿ ಭಕ್ತಿಯಿಂದ ಬಿದ್ದುಮೂರ್ಛೆಹೋದ ಮಳೆಯರಾಜನನ್ನು ಕುರಿತು "ಮಗನೆ, ವರವನ್ನು ಬೇಡಿಕೊ; ಕೊಡುತ್ತೇನೆ" ಎಂದು ಹೇಳಿದನು. ಮೂರ್ಛೆಯಿಂದ ಎದ್ದ ಮಳೆಯರಾಜನು "ದೇವ ನನ್ನ ತಾಯಿತಂದೆಗಳ ಮನಸ್ಸಿನ ಮಾಯೆಯನ್ನು ಕಳೆದು, ನನಗೆ ಶತಾಯುವನ್ನು ಕರುಣಿಸು" ಎಂದು ಬೇಡಿಕೊಂಡನು.

"ಆಯುಸ್ಸನ್ನು ಕೊಟ್ಟೆ; ಮತ್ತೇನು ಬೇಕು? ಬೇಡು." "ದೇವ, ನೂರುವರ್ಷ ಭಕ್ತಿಯಿಂದ ಬಾಳಿದ ಮೇಲೆ ತಾಯಿ ತಂದೆಗಳೊಡನೆಯೂ, ಚತುರಂಗ ಬಲದೊಡನೆಯೂ, ನನ್ನ ಸಕಲ ಪ್ರಜಗಳೊಡನೆಯೂ, ಸಕಲ ಪ್ರಾಣಿ ಗಳೊಡನೆಯೂ ನನ್ನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಬೇಕು. "ನನ್ನ ಭಕ್ತನಿಧಿಯೆ, ಕೊಟ್ಟೆನು ; ಸುಖದಿಂದಿರು" ಎಂದು ವರವನ್ನು ಕೊಟ್ಟು ಶಿವನು ಲಿಂಗ ದೊಳಹೊಕ್ಕನು.

ಅನಂತರ ಮಳೆಯರಾಜನು ಉತ್ಸಾಹದಿಂದ ರಂಗಮಂಟಪಕ್ಕೆ ಕುಣಿಕುಣಿಯುತ್ತ ಬಂದು, ತಂದೆಯ ಪಾದಗಳಲ್ಲಿ ಬಿದ್ದು, ತಂದೆತಾಯಿಗಳನ್ನೂ ಇಷ್ಟಮಿತ್ರರನ್ನೂ ಅಪ್ಪಿಕೊಂಡು ಸಂತಸಗೊಂಡನು. ಬಳಿಕ ಅವನು ತನ್ನ ತಾಯಿ ತಂದೆಗಳೊಡನೆಯೂ ಚತುರಂಗ ಬಲದೊಡನೆಯೂ ಆನೆಯ ಮೇಲೆ ಕೂತು ಪಟ್ಟಣಕ್ಕೆ ಬಂದನು. ಪಟ್ಟಣದಲ್ಲಿ ಎಲ್ಲೆಲ್ಲೂ ಗುಡಿ ತೋರಣಗಳ ಅಲಂಕಾರ, ಎಲ್ಲೆಲ್ಲೂ ಸಂಭ್ರಮ. ಮಳೆಯ ರಾಜನು ಅರಮನೆಗೆ ಬಂದು ಆನೆಯಿಂದ ಇಳಿದು, ಸಿಂಹಾಸನಾಸೀನನಾಗಿ

ಪ್ರಜೆಗಳನ್ನು ಕುರಿತು “ ಎಲ್ಲರೂ ಭಕ್ತಿಯುಕ್ತರಾಗಬೇಕು; ಶಿವಪೂಜೆ ಮಾಡಬೇಕು. ನಮ್ಮ ದೇಶದ ಎಲ್ಲ ಪುರದಲ್ಲಿಯೂ ಶಿವಾರ್ಚನೆ ನಡೆಯ ಬೇಕು ” ಎಂದು ಸಾರಿದನು.

ತಾನು ಪ್ರತಿನಿತ್ಯವೂ ಬಹಳ ಭಕ್ತಿಯಿಂದ, ಬಹಳ ಬೆಲೆಯಾದ ಪೂಜಾ ಸಾಮಗ್ರಿಗಳನ್ನು ಅರ್ಪಿಸಿ ಶಿವನನ್ನು ಪೂಜಿಸುತ್ತಿದ್ದನು. ಹಾಗೆ ಪೂಜಿಸುತ್ತಿರುವಾಗ ಹಗಲೂ ಇರುಳೂಕೂಡ ತಿಳಿಯದೆ ಶಿವಭಕ್ತಿರತ ನಾಗಿರುತ್ತಿದ್ದನು.

ಒಂದುಸಾರಿ ತನ್ನ ದೇಶದಲ್ಲಿ ಶಿವಭಕ್ತಿ ಹೇಗೆ ನಡೆಯುತ್ತಿದೆಯೋ ನೋಡಬೇಕೆಂದು ಬಯಸಿ, ಶಿವನ ಅಪ್ಪಣೆ ಪಡೆದು ಹೊರಟನು.

ದೇಶದಲ್ಲಿ ಎಲ್ಲೆಲ್ಲೂ ಶಿವಪೂಜೆ; ಊರೂರಿನಲ್ಲಿ ಶಿವಪೂಜೆ; ಕೇರಿ ಕೇರಿಯಲ್ಲಿ ಶಿವಪೂಜೆ; ಬೀಡು ಬೀಡಿನಲ್ಲಿ ಶಿವಪೂಜೆ; ದಾರಿದಾರಿಯ ಲ್ಲಿಯೂ ಶಿವಪೂಜೆ; ಪ್ರಜೆಗಳ ನಡೆ, ನುಡಿಗಳೆಲ್ಲವೂ ಶಿವಪೂಜೆ; ಬಾಳು ಬಯಕೆಗಳೆಲ್ಲವೂಶಿವಪೂಜೆ. ಒಟ್ಟಿನಲ್ಲಿ ಮಳೆಯದೇಶ ಭೂಲೋಕದಲ್ಲಿರುವ ಚಂದ್ರಲೋಕದಂತೆ ಇತ್ತು. ಇದನ್ನು ನೋಡಿ ಮಳೆಯರಾಜನು ಸಂತೋಷ ಪಟ್ಟು, ಭಕ್ತರಿಗೆ ಮೆಚ್ಚನ್ನು ಕೊಟ್ಟು ರಾಜಧಾನಿಗೆ ಹಿಂತಿರುಗಿದನು. ಹಿಂತಿರುಗಿ ಬಹಳ ವೈಭವದಿಂದ ಶಿವನ ಪೂಜೆಯನ್ನು ನೆರವೇರಿಸುತ್ತಿ ದ್ದನು. ಹೀಗೆ ನೂರು ವರ್ಷಗಳು ಕಳೆದು ಹೋದವು. ಆಗ ಮಳೆಯರಾಜ ನಿಗೆ ಈ ಮರ್ತ್ಯಲೋಕದ ಸುಖ ಸಾಕು ಎನಿಸಿತು. ಅಂತೆಯೇ ಹರನನ್ನು ಕುರಿತು “ ದೇವ, ಇಲ್ಲಿನ ಸುಖಸಾಕು.ರಜತಗಿರಿಗೆ ಕರೆದು ಕೊಂಡು ಹೋಗಯ್ಯ ” ಎಂದು ಬಿನ್ನವಿಸಿ ಕೊಂಡನು.

ತತ್ ಕ್ಷಣವೇ ಪಂಚವದನನು. ಪ್ರತ್ಯಕ್ಷನಾದನು. ಅವನ ಗಣ ಕುಲವೆಲ್ಲವೂ ನೆರೆಯಿತು. ಶಿವನು ಮಳೆಯರಾಜನನ್ನು ತನ್ನ ಗಣಕುಲಕ್ಕೆ ತೋರಿ, ಅವನನ್ನೂ ಅವನ ದೇಶವನ್ನೂ ರುದ್ರಲೋಕಕ್ಕೆ ಕೊಂಡೊಯ್ದ

ನೆಂದನು. ಅಂತೆಯೇ ಒಂಬತ್ತು ಲಕ್ಷ ಗ್ರಾಮದ ಆ ದೇಶ ಮೇಲೆ ನೆಗೆಯಿತು. ಪುಷ್ಪವೃಷ್ಟಿಯಾಯಿತು. ದುಂದುಭಿ ಮೊಳಗಿತು. ಅನೇಕ ಮಂಗಳವಾದ್ಯಗಳು ಭೋರ್ಗರೆದುವು. ಮಳೆಯ ದೇಶ, ದೇಶವೇ ಮೇಲೆ ನೆಗೆದುದನ್ನು ನೋಡಿ ಅಮರರಿಗೆಲ್ಲ ಆಶ್ಚರ್ಯವಾಯಿತು. ದೇವಲೋಕ - ಮರ್ತ್ಯ ಲೋಕಗಳ ಭೇದ ತಿಳಿಯಲಿಲ್ಲ. ಶಿವಾಲಯದ ಬಾಗಿಲಿಗೆ ಹೋಗಿ ಆ ದೇಶ ನಿಂತಿತು. ಶಿವನು ಒಳಹೊಕ್ಕು ಸಿಂಹಾಸನಾರೂಢನಾದನು. ತಂದೆ ಮಕ್ಕಳಿಬ್ಬರನ್ನೂ ನಂದೀಶ್ವರನಿಗೆ ತೋರಿಸಿ, ದೇಶ ಸಮೇತ ಕೈಲಾಸಕ್ಕೆ ಬಂದ ಭಕ್ತರೆಂದು ಹೊಗಳಿದನು. ಪರಮೇಶನ ದಯೆಯಿಂದ ಮಳೆಯರಾಜನಿಗೂ ದೇವರಾಜನಿಗೂ ಗಣಪದವಿ ದೊರೆಯಿತು. ಶಂಕರನು ಮಳೆಯ ದೇಶವನ್ನು ಸುವರ್ಣಗಿರಿಯಲ್ಲಿ ಇರಿಸಿದನು.

## ೮ ಓಹಿಲಯ್ಯ

ಉತ್ತರ ದೇಶದಲ್ಲಿ ಒಂದು ಪಟ್ಟಣ; ಆ ಪಟ್ಟಣದಲ್ಲಿ ಒಬ್ಬ ದೊರೆಯಿದ್ದನು. ಅವನ ಹೆಸರು ನಿಃಕುಂಭ. ಅವನು ಕರಿತುರಗರಥಪದಾತಿ ಸಂಪತ್ತಿನಿಂದ ಪ್ರಬಲನಾಗಿ ಸುಖವಾಗಿ ರಾಜ್ಯವಾಳುತ್ತಿದ್ದನು. ಅವನಿಗೆ ವಿರೋಧಿ ರಾಜರಾರೂ ಇರಲಿಲ್ಲ. ಹೀಗೆ ಸುಖವಾಗಿ ರಾಜ್ಯವಾಳುತ್ತಿದ್ದರೂ ಆ ರಾಜನಿಗೆ ಮಕ್ಕಳಿಲ್ಲವೆಂಬ ಒಂದು ಚಿಂತೆ ಅವನನ್ನು ಬಹಳ ಬಾಧಿಸುತ್ತಿತ್ತು. ರಾಜನೂ ದೇವರ ಸೇವೆ ಮಾಡಲು ಮನಸ್ಸು ಮಾಡಿಕೊಂಡು ಶುಚಿರ್ಭೂತನಾಗಿ ದೇವಾಲಯಕ್ಕೆ ಬಂದು ಎಡೆಬಿಡದೆ ಶಿವಲಿಂಗಕ್ಕೆ ಅಭಿಷೇಕಮಾಡಿ, ಪೂಜಿಸಿದನು.

ಕರುಣಾಕರನಾದ ಶಿವನು ಪ್ರತ್ಯಕ್ಷನಾಗಿ, ಜ್ಞಾನತನುವೂ ನಿರುಪಮಾನಂದನೂ ಮಾಯಾವಿಕಾರರಹಿತನೂ ಸಚ್ಚರಿತ್ರನೂ ಆದ ಒಬ್ಬ ಮಗ ಹುಟ್ಟುವನೆಂದು ರಾಜನಿಗೆ ಹೇಳಿ ಲಿಂಗದೊಳಪ್ಪೊಕ್ಕನು.

ರಾಜನು ಸಂತೋಷದಿಂದ ಅರಮನೆಗೆ ಬಂದು ಸುಖವಾಗಿ ಕಾಲ ಕಳೆಯುತ್ತಿದ್ದನು. ಕೆಲವು ದಿನ ಕಳೆಯಲು, ಪಟ್ಟದರಾಣಿ ಗರ್ಭಿಣಿಯಾಗಿ ನವಮಾಸತುಂಬಿ ಸುಮುಹೂರ್ತದಲ್ಲಿ ಸುಪುತ್ರನನ್ನು ಪಡೆದಳು. ರಾಜನು ಹಿಡಿಸಲಾರದ ಸಂತೋಷದಿಂದ ಜಾತಕರ್ಮ ನಾಮಕರಣ ಮಹೋತ್ಸವಗಳನ್ನು ನಡೆಸಿ ಓಹಿಲಯ್ಯನೆಂದು ಹೆಸರಿಟ್ಟನು.

ಹರಭಕ್ತಿಯೇ ಮೂರ್ತಸ್ವರೂಪವನ್ನು ಪಡೆದಂತೆ ಓಹಿಲಯ್ಯನು ಬೆಳೆಯುತ್ತಿದ್ದನು. ಅವನಿಗೆ ಏನೊಂದೂ ತಿಳಿಯದು; ಮಾತನಾಡುವುದನ್ನು ಅರಿಯನು; ಉಣ್ಣುವುದನ್ನು ತಿಳಿಯನು; ಹಿಂದು ಮುಂದೆಂಬುದನ್ನು ಅರಿಯನು; ತಾಯಿ ತಂದೆ ಬಂಧು ಬಳಗವನ್ನು ಅರಿಯನು; ಎಡಬಲವೆಂಬುದನ್ನೂ ಅರಿಯನು. ಯಾವಾಗಲೂ ವೈರಾಗ್ಯ ಪರನಾಗಿ, ಶಂಕರನನ್ನೇ ಧ್ಯಾನಿಸುತ್ತ ಇದ್ದನು. ಯಾರು ಏನು ಮಾತನಾಡಿಸಿದರೂ

ಮೌನವಾಗಿರುತ್ತಿದ್ದನು. ಅವನು ಹಸಿವಾಗಿದೆಯೆಂದೂ ಹೇಳುತ್ತಿರಲಿಲ್ಲ. ತಾನಾಗಿ ಯಾವುದನ್ನೂ 'ಬೇಕು, ಬೇಡ' ಎಂದು ಹೇಳುತ್ತಿರಲಿಲ್ಲ. ಪರಿಜನರರೆಲ್ಲರೂ ಅವನನ್ನು ಮುಗ್ಧನೆಂದು ಕೇಳಿದರು. ಪಾಪ! ಅವನು ಜ್ಞಾನತನುವೆಂದು ಅವರಿಗೇನುಗೊತ್ತು!

ಓಹಿಲಯ್ಯನಿಗೆ ಹದಿನಾರು ವಯಸ್ಸಾಯಿತು. ರೋಗದ ನೆಪದಿಂದ ರಾಜನು ತೀರಿಕೊಂಡನು. ಪುರಜನರೂ ಪರಿಜನರೂ ಗೋಳಾಡಿದರು; 'ಗೋಳೋ' ಎಂದು ಅತ್ತರು ಕಣ್ಣೀರಿನಿಂದ ಭೂಮಿಯೆಲ್ಲ ಕೆಸರಾಗುವುದರಲ್ಲಿತ್ತು. ಮಂತ್ರಿಗಳೂ ಇಷ್ಟಮಿತ್ರರೂ ಮೂರ್ಛೆಗೊಂಡಿದ್ದರು. ಎಲ್ಲರೂ ದಿಕ್ಕು ತೋಚದೆ ನಿಂತಿದ್ದರು.

ಅವರು ಓಹಿಲಯ್ಯನಿದ್ದಲ್ಲಿಗೆ ಬಂದು ರಾಜನು ಸತ್ತ ಸಮಾಚಾರವನ್ನು ತಿಳಿಸಿದರು. ಅವನಿಗೆ ಏನೊಂದೂ ಅರ್ಥವಾಗದೆ "ಸತ್ತ" ನೆಂಬುದರ ರೀತಿ ಏನೆಂದು ಕೇಳಿದನು. ರಾಜಕುಮಾರನ ಮುಗ್ಧತೆಗೆ ಮಂತ್ರಿಗಳು ಮತ್ತೆ ಅಳಲಾರಂಭಿಸಿದರು. ಹೇಗೋ ಓಹಿಲಯ್ಯನನ್ನು ಕರೆದುಕೊಂಡು ರಾಜ ಮರ್ಯಾದೆಯೊಡನೆ ಶವವನ್ನು ರುದ್ರಭೂಮಿಗೆ ತಂದರು. ದುಃಖಾತುರರಾದ ಪುರಜನರೂ ಪರಿಜನರೂ ಸುತ್ತಲೂ ನೆರೆದಿದ್ದರು. ಚಂದನದ ತುಂಡುಗಳಿಂದ ಚಿತೆಯನ್ನು ಸಿದ್ಧಮಾಡಿ, ಓಹಿಲಯ್ಯನಿಂದ ಅಗ್ನಿಸಂಸ್ಕಾರ ಮಾಡಿದರು. ಅನಂತರ ಶವದಹನವನ್ನು ನಿರೀಕ್ಷಿಸುತ್ತ ರಾಜಕುಮಾರನೊಡನೆ ಎಲ್ಲರೂ ಒಂದು ಮರದ ನೆರಳಿನಲ್ಲಿದ್ದರು. ಆಗ ಪರಮ ವೈರಾಗ್ಯನಿಧಿಯಾದ ಓಹಿಲಯ್ಯನು "ನನ್ನ ತಂದೆ ಎಂದು ಮರಳಿ ಬರುವನು?" ಎಂದನು.

ಅದನ್ನು ಕೇಳಿ ಅವನ ಮುಗ್ಧತೆಗೆ ಎಲ್ಲರೂ ಮನನೊಂದರು. "ನನ್ನ ಮಾತಿಗೆ ತಲ್ಲಣಿಸಬೇಡಿ; ನನಗೆ ತಿಳಿಸಿರಿ: ತಂದೆ ಏನಾಗುತ್ತಾನೆ?"! ಎಂದು ರಾಜಕುಮಾರನು ಕೇಳಿದನು. ಆಗ ಹಿರಿಯರು

" ಕುಮಾರ, ನಿಮ್ಮ ತಂದೆ ಇನ್ನು ಎಂದೂ ಬರುವುದಿಲ್ಲ; ಉರಿದು ಭಸ್ಮ ವಾದನು ; ಸತ್ತನು. " ಎಂದು ತಿಳಿಸಿದರು. ಕುಮಾರನು ಅದನ್ನು ಕೇಳಿ ಆಶ್ಚರ್ಯ ಪಟ್ಟನು. ಅನಂತರ ತನ್ನ ಮುಂದೆ ಹಿಂದೆ ಕೆಲ ಬಲದಲ್ಲಿದ್ದವರ ವಿಷಯವಾಗಿ ಪ್ರಶ್ನಿಸಿ ಎಲ್ಲರಿಗೂ ಕಾಲಕ್ರಮದಲ್ಲಿ ಅದೇ ಗತಿಯೆಂಬು ದನ್ನು ತಿಳಿದನು.

ಓಹಿಲಯ್ಯನು ಹೀಗೆ ಕೇಳುತ್ತಿರುವಾಗ ಒಬ್ಬ ಭಕ್ತನು ಕಾಣಿಸಿ ಕೊಂಡು ಕುಮಾರನ ಪರಿಗೆ ಆಶ್ಚರ್ಯ ಪಟ್ಟನು; ಇವನಿಗೆ ಸತ್ಯವನ್ನು ತಿಳಿಸುತ್ತೇನೆ. ಎಂದು ಮನದಲ್ಲಿ ಅಂದುಕೊಳ್ಳುತ್ತಿದ್ದನು. ಕುಮಾರನು " ತನಗೂ ಇದೇ ವಿಧಿಯೇ ? ಈ ಸಾವನ್ನು ತಪ್ಪಿಸುವ ಸಮರ್ಥರಿದ್ದಾರೆ ಯೇ "? ಎಂದು ಪ್ರಶ್ನಿಸಿದನು.

ಆಗ ಭಕ್ತನು "ನಿನಗೂ ಇದೇ ವಿಧಿ. ಈ ಸಾವನ್ನು ತಪ್ಪಿಸಲು ಸಮರ್ಥನಾದವನೊಬ್ಬನಿದ್ದಾನೆ. ಅವನು ಭಕ್ತ ಸಂಕುಲವನ್ನಗಲದ, ಗುಣಾತೀತನಾದ, ಸತ್ಯನಾದ ಸೌರಾಷ್ಟ್ರಪತಿ ಸೋಮನಾಥ. ಇಲ್ಲಿಗೆ ಇಪ್ಪತ್ತು ಯೋಜನ ದೂರದಲ್ಲಿದ್ದಾನೆ " ಎಂದನು

ಆಗ ಓಹಿಲದೇವನು ಆ ಭಕ್ತನ ಹಸ್ತವನ್ನು ತನ್ನ ತಲೆಯ ಮೇಲಿಡಿಸಿಕೊಂಡು, ಆತನ ಮಾತನ್ನು ಚಿಂತಿಸುತ್ತಾ ಆತನನ್ನೇ ಗುರುವಾಗಿ ಸ್ವೀಕರಿಸಿದನು.: ತನ್ನ ವಸ್ತ್ರಾಭರಣಗಳನ್ನೆಲ್ಲ ಈಡಾಡಿದನು; ಕೌಪೀನವನ್ನು ಧರಿಸಿ, ಭಸ್ಮವನ್ನು ಪೂಸಿಕೊಂಡು, ಸೋಮನಾಥನನ್ನು ಧ್ಯಾನಿಸುತ್ತ, ಹೊರಟನು. ಮಂತ್ರಿಗಳಾದಿಯಾಗಿ ಎಲ್ಲರೂ ಎಷ್ಟು ಹೇಳಿದರೂ ಕೇಳದೆ ಕುಮಾರನು ಹೊರಟನು. ದಾರಿಯಲ್ಲಿ ಹೋಗುವಾಗ ಕಾಲಿನಲ್ಲಿ ಬೊಬ್ಬೆಯೆದ್ದು, ಬೆರಳಿನಿಂದ ರಕ್ತ ಸುರಿಯುತ್ತಿದ್ದರೂ ಲೆಕ್ಕಿಸದೆ, ಹಸಿವು - ಬಾಯಾರಿಕೆ, ಬಿಸಿಲು - ಮಳೆಗಳನ್ನು ಗಮನಿಸದೆ ಸೋಮನಾಥನಲ್ಲಿಗೆ ಬಂದನು.

ಸೋಮನಾಥಾಲಯದ ಕಳಸವನ್ನು ಕಂಡು ಹಿಗ್ಗಿ, ನಮಸ್ಕರಿಸಿ ಪಟ್ಟಣವನ್ನು ಪ್ರವೇಶಿಸಿದನು; ಶಿವಾಲಯದೊಳಕ್ಕೆ ಹೋದನು. ಅವನು ಶಿವಲಿಂಗವನ್ನು ಅಪ್ಪಿ, ಮುದ್ದಾಡಿ, ಪುಳಕವಡೆದು, "ದೇವ, ನೀನೊಡೆಯ, ನಾನು ಕಿಂಕರ: ಸಾಯುವವರನ್ನು ನೋಡಿ, ಅಂಜಿ, ಸಾವಿಗೆ ಭೀತಿಗೊಂಡು ಬಂದಿದ್ದೇನೆ: ನನ್ನನ್ನು ಸಲಹು, ಸಲಹು." ಎಂದು ಭೀತಿಯಿಂದ ಬಿನ್ನೈಸಿಕೊಂಡನು.

೨

ಹೀಗೆ ಓಹಿಲಯ್ಯನು ಸೋಮನಾಥನ ಮುಂದೆ ಕುಳಿತು, ಸಾವಿನ ಭೀತಿಯಿಂದ ಅತ್ತು, ಅತ್ತು, ಸಲಹೆಂದು ಬೇಡಿಕೊಳ್ಳುತ್ತಿರಲು ಪ್ರಧಾನ ಅರ್ಚಕನು ದೀಪವನ್ನು ಹಿಡಿದುಕೊಂಡು ಗರ್ಭಗೃಹಕ್ಕೆ ಬಂದನು; ಶಿವಲಿಂಗದ ಪಕ್ಕದಲ್ಲಿ ಓಹಿಲಯ್ಯನನ್ನು ನೋಡಿ ''ಕತ್ತಲಿನಲ್ಲಿ ಇಲ್ಲಿ ಏಕೆ ಇದ್ದೀಯೆ" ಎಂದು ಕೇಳಿದನು. ಅದಕ್ಕೆ ಓಹಿಲಯ್ಯನಿಂದ ಉತ್ತರ ಬರಲಿಲ್ಲ. ಅರ್ಚಕನು ಅವನನ್ನು ಕೈಹಿಡಿದೆಳೆದು ಹೊರಕ್ಕೆ ಕಳುಹಿಸುವ ಪ್ರಯತ್ನ ಮಾಡಿದನು. ಆಗ ಭಕ್ತನು ಶಿವಲಿಂಗವನ್ನು ತಬ್ಬಿಕೊಂಡು "ಬಿಡೆನು, ಶಿವನನ್ನು ಬಿಡೆನು; ಬಿಟ್ಟಿರಲಾರೆನು." ಎಂದು ಒರಲಿದನು. ಅರ್ಚಕನು ಬಲಾತ್ಕಾರದಿಂದ ''ಶಿವನೆ, ಭವನೆ, ಗುರುವೆ,' ಎಂದು ಅಳುತ್ತಿದ್ದ ಬಾಲಕನನ್ನು ಹೊರಕ್ಕೆ ಎಳೆದು ಹಾಕಿ, ಬಾಗಿಲಿಗೆ ಬೀಗ ಮುದ್ರೆಯನ್ನು ಮಾಡಿ ಹೊರಟು ಹೋದನು.

ಇತ್ತ ಓಹಿಲಯ್ಯನು ಬಾಗಿಲಿನಲ್ಲಿ ಕುಳಿತು ಹೊಸಲಿಗೆ ತಲೆಯನ್ನು ಇಟ್ಟು "ತಂದೆ. ಅಯ್ಯ, ದೇವ, ನಂಬಿದವನನ್ನು ನೂಕುವುದೇ? ಹೊರ ಹೊರಡಿಸುವುದೇ ?'' ಎಂದು ಮಂತಾಗಿ ಗೋಳಾಡಿದನು. ಆಗ ಕರುಣಿಗಳ ಅರಸನಾದ ಸೋಮನಾಥನು ತಾನೇ ಕದವನ್ನು ತೆರೆಯಲು ಇಚ್ಛಿಸದೆ, ಭಕ್ತನನ್ನು ಎಲ್ಲರಿಗೂ ತೋರಿಸಬೇಕೆಂದು ಮನಸ್ಸು ಮಾಡಿ

ದನು. ಅಂತೆಯೇ ಮಲಗಿದ್ದ ಮುಖ್ಯಶಿವಾರ್ಚಕನ ಗಂಟಲನ್ನು ತ್ರಿಶೂಲದಿಂದ ಅಮುಮಿ “ ನನ್ನ ಭಕ್ತನನ್ನು ಹೊರ ಹೊರಡಿಸಿ ಕದವನ್ನು ಹಾಕಬಾರದು: ಬೇಗ ಒಳಕ್ಕೆ ಪ್ರವೇಶಿಸು.” ಎಂದು ಕನಸಿನಲ್ಲಿ ಅಪ್ಪಣೆ ಮಾಡಿದನು.

ಪೂಜಾರಿಗೆ ಭಯವಾಯಿತು; ಅವನು ಬೆದರಿದನು. ಹೇಗೋ ಧೈರ್ಯಮಾಡಿ, ಪರಿಚಾರಕರಿಗೆ ವಿಷಯವನ್ನೆಲ್ಲ ತಿಳಿಸಿ ಮಧ್ಯರಾತ್ರಿಯಲ್ಲಿಯೇ ಶಿವಾಲಯಕ್ಕೆ ಬಂದನು. ಬಂದು ಬಾಗಿಲನ್ನು ತೆಗೆದು “ಭಕ್ತಶಿರೋಮಣಿಯೆ, ಒಳಕ್ಕೆ ಹೋಗಯ್ಯಾ” ಎಂದು ಓಹಿಲಯ್ಯನನ್ನು ಬೇಡಿಕೊಂಡನು. ಅವನು ಒಳಕ್ಕೆ ಹೋದಕೂಡಲೆ, ಬಾಗಿಲನ್ನು ಹಾಕಿ ಯಥಾ ಪ್ರಕಾರ ಬೀಗ ಮುದ್ರೆ ಮಾಡಿದನು. ಅನಂತರ ಒಳಗೆ ಭಕ್ತನು ಏನುಮಾಡುವನೋ ನೋಡಬೇಕೆಂಬ ಕುತೂಹಲದಿಂದ ಗವಾಕ್ಷಿಯಲ್ಲಿ ಅರ್ಚಕನೂ ಇತರರೂ ನೋಡಲಾರಂಭಿಸಿದರು.

ಓಹಿಲಯ್ಯನು ಜೀವ ಬಂದವನಂತೆಯೂ, ಕಣ್ಣು ಬಂದವನಂತೆಯೂ, ಆತುರದಿಂದ ಸೋಮನಾಥನನ್ನು ಬಿಗಿದಪ್ಪಿ, ಮುದ್ದಾಡಿ, ಶಿವನ ಹುಚ್ಚಿನಿಂದ ಉಬ್ಬಿ. ಅಬ್ಬರಿಸಿ, ಪುಳಕವಡೆಯುತ್ತಿದ್ದನು. ಆಗ ಸೋಮನಾಥನು ಭಕ್ತನನ್ನು ಬರಸೆಳೆದು ತೊಡೆಯ ಮೇಲೆ ಕೂಡಿಸಿಕೊಂಡು ಸವಿನುಡಿಗಳಿಂದ ಸಂತೈಸಿದನು, ಇದನ್ನು ನೋಡಿದವರು ಚಿಕ್ಕಸ ಬೆರಗಾಗಿ, ಹೊರಟರು.

ಸೂರ್ಯೋದಯ ವಾಯಿತು. ಎಂದಿನಂತೆ ದೇವಾಲಯದಲ್ಲಿ ಮಂಗಳವಾದ್ಯಗಳು ಘೋರರ್ಗರೆದವು. ನೃತ್ಯ, ಗೀತ, ಕಾವ್ಯ, ನಾಟಕ, ಪುರಾಣಗಳ ಸೇವೆ ನಡೆಯಿತು. ವೇದ ಪಾರಾಯಣದ ಮಂಜುಲ ಧ್ವನಿ ಹಬ್ಬಿತು. ಸೋಮನಾಥನಿಗೆ ಸುಖಮಜ್ಜನ ಮೊದಲಾದ ಸಕಲೋಪಚಾರ ಪೂಜೆ ನಡೆಯಿತು. ಅಧಿಕಾರಿ ಮುಖ್ಯರೆಲ್ಲರೂ ರಂಗ ಮಂಟಪ

ದಲ್ಲಿ ನೆರೆದಿದ್ದರು. ಆಗ ಸೋಮನಾಥನು ಸಾವಿಗಂಜಿ ಸಲಹು ಸಲಹೆಂದು ಬೇಡಿಕೊಳ್ಳುತ್ತಿದ್ದ ಓಹಿಲಯ್ಯನನ್ನು ಕುರಿತು "ಎಲೆ ಕಂದ, ಹನ್ನೆರಡು ವರ್ಷ ನಿನ್ನ ಮನಸದಣಿಯುವಂತೆ ಸಂತೋಷದಿಂದ ನನಗೆ ಗುಗ್ಗುಳ ಸೇವೆಯನ್ನು ಮಾಡು. ಆಗ ದೇವತೆಗಳೂ ಬೆರಗಾಗುವಂತೆ ನಿನ್ನನ್ನು ಸಶರೀರನಾಗಿ ಕೈಲಾಸಕ್ಕೆ ಕರೆದುಕೊಂಡು ಹೋಗುವೆನು" ಎಂದು ಹೇಳಿದನು.

ಓಹಿಲಯ್ಯನ ಆನಂದಕ್ಕೆ ಪಾರವೇಇಲ್ಲ. ಧೂಪವನ್ನು ತರಲು ದ್ವೀಪಾಂತರಕ್ಕೆ ಹೊರಟನು, ಅವನೊಡನೆ ಎಲ್ಲ ಅಂತಸ್ಥನ ಶಿಷ್ಯರೂ ಹೊರಟರು. ಪಲ್ಲಕ್ಕಿ ಚಾಮರಾದಿಗಳೂ ಬಂದುವು. ಹೀಗೆ ಸಾಮ್ರಾಜ್ಯ ವೈಭವದಿಂದ ಓಹಿಲಯ್ಯನು ಹೊರಟು ಅನೇಕ ಶಿವ ಕ್ಷೇತ್ರಗಳನ್ನು ಸಂದರ್ಶಿಸಿ ದ್ವೀಪಾಂತರಗಳನ್ನು ತಲುಪಿ, ಧೂಪವನ್ನು ಸಂಪಾದಿಸಿ ಕೊಂಡು ಸೌರಾಷ್ಟ್ರಕ್ಕೆ ಮರಳಿದನು. ರಾಜನೇ ಅವನನ್ನು ಎದುರು ಗೊಂಡನು. ಓಹಿಲಯ್ಯನು ಶಿವಾಲಯಕ್ಕೆ ಬಂದು ತಾನು ತಂದ ಗುಗ್ಗುಳವನ್ನು ಸೋಮನಾಥನಿಗೆ ಒಪ್ಪಿಸಿದನು; ಎಲ್ಲವನ್ನು ಭಂಡಾರಕ್ಕೆ ಸೇರಿಸಿದನು; ಅದರಲ್ಲಿ ಶ್ರೇಷ್ಠವಾದ ಗುಗ್ಗುಳವನ್ನು ಸಕ್ಕರೆ, ಜೇನುತುಪ್ಪ, ಹೊಸತುಪ್ಪ - ಇವುಗಳಲ್ಲಿ ನೆನೆಸಿ ಅರ್ಪಿಸಲು ಲಿಂಗದಿಂದ ಶ್ರೀ ಹಸ್ತ ಕಾಣಿಸಿಕೊಂಡು ಅದನ್ನು ಸ್ವೀಕರಿಸಿತು. ಶಿವಾಲಯವನ್ನು ಮುಚ್ಚಿದ ಮೇಲೆ ಕೂಡ ಓಹಿಲಯ್ಯನು ಧೂಪವನ್ನು ಹಾಕುತ್ತಿದ್ದನು ದ್ವೀಪಾಂತರ ಗಳಿಗೆ ಹೋಗಿ ಉತ್ತಮೋತ್ತಮವಾದ ಧೂಪವನ್ನು ತರಿಸುತ್ತಿದ್ದನು ಇದರಿಂದ ಅವನಿಗೆ ಧೂಪದೋಹಿಲಯ್ಯನೆಂದು ಹೆಸರಾಯಿತು.

ಹನ್ನೆರಡು ವರ್ಷ ಕಳೆಯಿತು. ಸಶರೀರ ನಾಗಿ ಕೈಲಾಸಕ್ಕೆ ಹೋಗುವೆನೆಂಬ ಗರ್ವದಿಂದ ದೇವನಲ್ಲಿಗೆ ಬಂದು,

"ದೇವ, ನೀನು ಕರುಣಿಸಿದ ಹನ್ನೆರಡು ವರ್ಷ ಕಳೆಯಿತು

ನನಗೆ ಕರುಣೆದೋರು” ಎಂದು ಬಿನ್ನವಿಸಿಕೊಂಡನು.

“ಮಗನೆ, ಇನ್ನು ನಮ್ಮ ಚಿಂತೆ ನಿನಗೇಕೆ? ನಿನ್ನ ಹಿಂದಿನ ರಾಜ್ಯದ ನೂರರಷ್ಟು ಸಂಪತ್ತು ನಿನಗೆ ಉಂಟಾಗಿದೆ. ಸಂತೋಷವಾಗಿರು” ಎಂದು ಹೇಳಿದನು. ಇದರಿಂದ ಹನ್ನೆರಡು ವರ್ಷದ ದುಃಖವೂ ಒಂದೇಸಾರಿ ಕವಿದಂತಾಯಿತು. ಅವನಿಗೆ; ತನ್ನ ಅಹಂಕಾರದ ಅರಿವು ಉಂಟಾಯಿತು. ಓಹಿಲನು ತನ್ನ ತಪ್ಪಿಗಾಗಿ ಬಹಳ ಬೇಡಿಕೊಂಡನು. ಬಗೆಬಗೆಯಾಗಿ ಪ್ರಾರ್ಥಿಸಿಕೊಂಡನು ಆಗ ಸೋಮನಾಥನು ಅವನ ಕಣ್ಣೀರನ್ನು ಬರಸಿ “ಮಗನೆ, ಪ್ರಪಂಚವೆಲ್ಲವು ನನ್ನ ವಸ್ತುವೇ ಆದರೂ ಯಾರಿಗೂ ತೊಂದರೆ ಕೊಡದೆ, ಪರರ ವಸ್ತುವಿಗೆ ಆಸೆಪಡೆಯದೆ, ನನ್ನ ವಸ್ತುವನ್ನೇ ನನಗೆ ಕೊಡುವ ರೀತಿಯನ್ನು ಕೇಳು :- ಹರಿಯುವ ಹೊಳೆಯ ನೀರನ್ನು ಕುಡಿದು, ಕಾಡಮರದ ನೆರಳಿನಲ್ಲಿ ನಿಂತು, ಅವುಗಳ ಹಣ್ಣು ತಿಂದು, ಮೆಳೆ - ಗುಹೆಗಳಲ್ಲಿ ಮಲಗಿದ್ದೂ, ಎಲ್ಲರಿಗೂ ಸಮಾನಾಧಿಕಾರದ. ಭೂಮಿಯಲ್ಲಿನ ಹಣವನ್ನು ತೆಗೆದುಕೊಂಡು, ಧೂಪಕ್ಕೆ ಕೊಟ್ಟು, ತಂದು, ಹೊತ್ತುಹೊತ್ತಿಗೆ ನನಗೆ ಗುಗ್ಗುಳವನ್ನು ಅರ್ಪಿಸಿ, ಇನ್ನೊಮ್ಮೆ ಹನ್ನೆರಡು ವರ್ಷ ಸೇವೆ ಸಲಿಸದರೆ ನಿನ್ನ ಮನೋರಥ ಈಡೇರುವುದು.’ ಎಂದು ಬೆಸಸಿದನು.

೩

ಓಹಿಲಯ್ಯ ಶಿವನಿಗೆ ನಮಸ್ಕರಿಸಿದನು: ರುದ್ರಾಕ್ಷಿ, ಭಸಿತ, ಹೊಸ ಕೌಪೀನ - ಇವುಗಳಿಂದ ಅಲಂಕೃತನಾದನು. ಅವನು ಒಂದು ಕಾವಡಿಯನ್ನು ತೆಗೆದುಕೊಂಡು, ಎರಡು ದೊಡ್ಡಪಾತ್ರೆಗಳನ್ನು ಆದರಲ್ಲಿಟ್ಟನು; ಕಾವಿಯ ಬಟ್ಟೆಯಿಂದ ಪಾತ್ರೆಗಳನ್ನು ಮುಚ್ಚಿ, ಕಂಬಿಯನ್ನು ಎತ್ತಿಕೊಂಡು ಹೊರಟನು. ಸೋಮನಾಥನನ್ನು ಬಿಟ್ಟು ಹೋಗಲಾರದೆ, ಹಿಂದಕ್ಕೆ ಬಂದು, ಕಾವಡಿಸಹಿತನಾಗಿ ಸೋಮ

ನಾಥನನ್ನು ಬಿಗಿದಪ್ಪಿದನು. ಅನಂತರ ಅವನು ಪೂಜಾರಿಗಳನ್ನು ಕುರಿತು "ಶಿವನಿಗೆ ಧೂಪದ ಕೊರತೆಯನ್ನು ಮಾಡಬೇಡಿ. ಬೇಕಾದಷ್ಟನ್ನು ಕೊಡಿ." ಎಂದು ಹೇಳಿ ಆದರಿಂದ ನಂಬಿಕೆಯನ್ನು ಪಡೆದು ಎಲ್ಲರಿಗೂ ನಮಸ್ಕರಿಸಿ ಹೊರಟನು. ಹಿಂದಿನಂತೆ ಅವನ ಹಿಂದೆ ಪರಿಜನರು ಬರಲು ಎಲ್ಲರನ್ನು ನಿಲ್ಲಿಸಿದನು; ಶಿವನು ಜನಸಂದಣಿಯನ್ನು ಸೈರಿಸನೆಂದು ಅವರಿಗೆ ತಿಳಿಸಿ ಒಬ್ಬನೇ ವಿರಕ್ತನಾಗಿ ಹೊರಟನು.

ಹೀಗೆ ಹೊರಟ ವಿರಕ್ತ ಓಹಿಲಯ್ಯನೊಡನೆ ಶಿವನು ಪ್ರಚ್ಛನ್ನ ವೇಷದಲ್ಲಿ ಬರುತ್ತಿದ್ದನು. ಓಹಿಲಯ್ಯನು ಬರಿಗಾಲಿನಲ್ಲಿ ನಡೆಯುತ್ತ. ಕಲ್ಲು, ಮುಳ್ಳು, ಕಾಡು, ಮೋಡು, ಬಿಸಿಲು, ಗಾಳಿ ಹಸಿವು - ನಿದ್ರೆ, ಹಗಲು - ರಾತ್ರಿ, ಯಾವುದನ್ನೂ ಲೆಕ್ಕಿಸದೆ ಪ್ರಯಾಣ ಮಾಡುತ್ತಿದ್ದನು ದಾರಿಯಲ್ಲಿ ಒಂದೊಂದು ಕಾಡ ಮರದ ಕೆಳಗೆ ಕಾವಡಿ (ಅಡ್ಡೆ) ಯನ್ನು ಇಳಿಸಿ ಸ್ವಲ್ಪ ವಿಶ್ರಯಿಸಿಕೊಂಡು ಮುಂದೆ ಹೋಗುತ್ತಿದ್ದನು. ಬಟ್ಟೆಯ ಕೌಪಿನವನ್ನು ಬಿಸಿಟ್ಟು, ನಾರುಡೆಯನ್ನು ಉಟ್ಟಿದ್ದನು. ಇದೆಲ್ಲವನ್ನೂ ನೋಡಿ ಅದೃಶ್ಯನಾಗಿ ಜೊತೆಯಲ್ಲಿ ಬರುತ್ತಿದ್ದ ಶಿವನನ್ನು ಮೆಚ್ಚಿದನು. ದಾರಿಯಲ್ಲಿ ಹರಿಯುತ್ತಿದ್ದ ನೀರನ್ನು ಶಿವಾರ್ಪಣವೆಂದನು; ಮರದ ಹಣ್ಣುಗಳನ್ನು ಶಂಕರಾರ್ಪಣವೆಂದನು; ಅನಂತ ವನ್ನಿಯುತ್ತಿದ್ದ ಕೊಳ, ಕಮಲಗಳನ್ನೆಲ್ಲ ಶಿವಾರ್ಪಣಮಾಡಿ, ತಾನಾಗಿ ಬೆಳೆದ ಹುಲ್ಲಿನ ಕಾಳನ್ನೂ ಹಣ್ಣನ್ನೂ ನದಿಯ ನೀರನ್ನೂ ಶಿವಪ್ರಸಾದವೆಂದು ಸ್ವೀಕರಿಸುತ್ತಿದ್ದನು. ಪ್ರಯಾಣ ಕಾಲದಲ್ಲಿ ಅವನಿಗೆ ನಾನಾ ವಿಧವಾದ ದುಷ್ಟಮೃಗಗಳು ಕಣ್ಣಿಗೆ ಬೀಳುತ್ತಿದ್ದುವು; ಆದರೂ ಅವನು ನಿರ್ಭಯನಾಗಿ ಹೋಗುತ್ತಿದ್ದನು. ಧೂಪದ ದ್ವೀಪ ಹತ್ತಿರವಾಗಿ ಶಿವನ ಮಾತು ನೆನಪಾಯಿತು ಅವನಿಗೆ.

ಆದಗಂತೆ ಓಹಿಲಯ್ಯನು ವಸುಮತಿಯನ್ನು "ಸೋಮನಾಥ

ಗುಗ್ಗುಳಕ್ಕೆ ಹೊನ್ನ ನೀಡನ್ವ" ಎಂದು ಬೇಡಿಕೊಂಡನು. ಒಂದು ದಾರಿಯಲ್ಲಿದ್ದ ಕೊಪ್ಪರಿಗೆಯ ಹೊನ್ನು ಕಣ್ಣಿಗೆ ಬಿತ್ತು. ಓಹಿಲಯ್ಯನು ತನ್ನ ಪಾತ್ರೆಯಿಂದ ಅದನ್ನು ತುಂಬಿಕೊಂಡು ಧೂಪದ ದ್ವೀಪಕ್ಕೆ ಹೋಗಿ ಆ ಹೊನ್ನು ಕೊಟ್ಟು ಅದೇ ಪಾತ್ರೆಯಲ್ಲಿ ಧೂಪವನ್ನು ತುಂಬಿಕೊಂಡನು; ಅದನ್ನು ಮುಚ್ಚಿ, ಕಟ್ಟಿ, ಎರಡುಕಡೆಯ ತೂಕವನ್ನು ಸರಿಮಾಡಿಕೊಂಡು ಹೆಗಲಿನಮೇಲೆ ಹೊತ್ತುತಂದು ಕೊಂಡನು.

ಓಹಿಲಯ್ಯನು ಧೂಪವನ್ನು ಹೊತ್ತು ಬರುತ್ತಿದ್ದಾಗ್ಗೆ ಅವನ ಒಂದೊಂದು ಹೆಜ್ಜೆಯೂ ಆವನಿಗೆ ಒಂದೊಂದು ದೇವ ಪದವಿಯನ್ನು ತರುತ್ತಿದ್ದಿತು. ಇಂದ್ರ, ಬ್ರಹ್ಮ, ಹರಿ, ಹರ, ಸಕಲ ದೇವ ಪದವಿಯೂ ಮುಗಿದ ಮೇಲೆ ಅವನಿಗೆ ಯಾವ ಪದವಿ ಕೊಡಬೇಕೆಂಬಚಿಂತೆ ಸೋಮ ನಾಥನಿಗಾಯಿತು. ಅಂತು ಓಹಿಲಯ್ಯನು ಬರುತ್ತಿದ್ದಾಗ ಅವನ ಕಾಲಿಗೆ ಸಿಕ್ಕಿದ ಪ್ರಾಣಿಗಳು ಸ್ವರ್ಗಕ್ಕೆ ನಡೆದವು. ಅವನು ನೋಡಿದ ಮರ ಗಿಡ, ಬೆಟ್ಟಗಳು ಸ್ವರ್ಗಕ್ಕೆ ನಡೆದವು. ಧೂಪವನ್ನೂ ಹೊತ್ತು ತರುತ್ತಿದ್ದ ಓಹಿಲಯ್ಯನು ಬಳಲಿ ಬೆಂಡಾದನು. ಕಾಲಿನಲ್ಲಿ ಬೊಬ್ಬೆ ಯೆದ್ದು ರಕ್ತ ಸುರಿಯಿತು. ಆದರೂ ಅವನು ಯಾವುದನ್ನೂ ಗಣಿಸದೆ, ಕಷ್ಟ ದಿಂದ ಬರುತ್ತಿದ್ದನು. ದಾರಿಯಲ್ಲಿ ಅಲ್ಲಲ್ಲಿ ಎಡವಿ ಬೀಳಲು, ಶಿವನು ಅವನನ್ನು ಎತ್ತುತ್ತಿದ್ದನು; ಕಾವಡಿಯ ಕಂಬಿಯು ಭಾರದಿಂದ ಬೀಳಲು, ತಾನೆ ಆದನ್ನು ಎತ್ತಿ ಓಹಿಲಯ್ಯನ ಹೆಗಲಮೇಲೇರಿಸಿದನು. ಓಹಿಲಯ್ಯನು ನಡೆಯಲಾರದವನಾಗಿದ್ದರೆ, ಅವನನ್ನು ಎತ್ತಿಕೊಂಡು ಹೋಗುತ್ತಿದ್ದನು, ಭಕ್ತಪ್ರಿಯ ಸೋಮನಾಥ. ಹೀಗೆ ಕಷ್ಟಪಡುತ್ತಿದ್ದ ಭಕ್ತನಜೊತೆಯಲ್ಲಿಯೇ ಇದ್ದನು ಶಿವನು.

ಹೀಗೆ ಭಕ್ತನು ಶಿವಕರುಣೆಯಿಂದ ಅಡವಿಯನ್ನು ಹಾದು ವಿಂಧ್ಯದೇಶವನ್ನು ದಾಟಿ, ಸೌರಾಷ್ಟ್ರಕ್ಕೆ ಬಂದನು. ಪುರಜನರು

ಅವನನ್ನು ದೂರದಲ್ಲಿಯೇ ನೋಡಿ, ಮಂಗಳ ವಾದ್ಯಗಳೊಡನೆ ಎದುರುಗೊಂಡರು; ಮುತ್ತೈದೆಯರು ಕಲಶ ಕನ್ನಡಿಯನ್ನು ತೆಗೆದುಕೊಂಡು ಹೋಗಿ ಎದುರುಗೊಂಡರು. ಓಹಿಲಯ್ಯನು ಶಿವಾಲಯಕ್ಕೆ ಬಂದು ಕಾವಡಿಯನ್ನು ಇಳಿಸಿ ಸೋಮನಾಥನನ್ನು ಅಡಿಗಡಿಗೆ ಅಪ್ಪಿಕೊಂಡು "ಏನಯ್ಯ, ಸೌರಾಷ್ಟ್ರಪತಿಯೆ, ನಾನು ತಡೆದೆನೆಂದು ದುಃಖ ಪಡುತ್ತಿದ್ದೆಯಾ ?" ಎಂದು ಬಿನ್ನವಿಸಿಕೊಂಡ. ತಾನು ತಂದ ಧೂಪವನ್ನು ಸಮರ್ಪಿಸಿದನು. ಅನಂತರ ಶ್ರೇಷ್ಠವಾದ ಗುಗ್ಗುಳವನ್ನು ಸಕ್ಕರೆಯಲ್ಲಿ, ತುಪ್ಪದಲ್ಲಿ, ನೆನೆಸಿ, ಧೂಪವನ್ನು ಹಾಕಿ ಆನಂದ ದಿಂದ ಕುಣಿದಾಡಿ ಮಣಿದಾಡಿದನು. ಬಳಿಕ ದೇವಾಲಯದ ಎಲ್ಲ ಕದಗಳನ್ನು ಗವಾಕ್ಷಿಗಳನ್ನು ಹಾಕಿಕೊಂಡು ದೇವರಿಗೆ ಬೇಕಾದಹಾಗೆ ಧೂಪಸೇವೆಯನ್ನು ಮಾಡಿದನು. ಆ ಧೂಪದ ಕಂಪು ಊರೂರಿನಲ್ಲಿಯೂ, ದೇಶ ದೇಶದಲ್ಲಿಯೂ ತುಂಬಿತು. ಹೀಗೆ ಹನ್ನೆರಡು ವರುಷ ಒಂದೇಸಮನೆ ಧೂಪವನ್ನು ಹಾಕಿ "ದೇವ, ನೀವು ಬೆಸಸಿದಂತೆ, ಹನ್ನೆರಡು ವರ್ಷಗಳನ್ನು ಕಳೆದೆನ ; ಪಿತೃಸ್ವಾನನ್ನು ಕರುಣಿಸು" ಎಂಬು ಬೇಡಿಕೊಂಡನು.

ಇತ್ತ ರಜತಗಿರಿಯಲ್ಲಿ ಶಿವನು ನಂದಿಯನ್ನು ಕುರಿತು "ಭೂಲೋಕದಲ್ಲಿ ಒಬ್ಬ ಭಕ್ತನಿದ್ದಾನೆ. ಅವನು ಸೌರಾಷ್ಟ್ರದಲ್ಲಿ ಓಹಿಲಯ್ಯನೆಂದು ಪ್ರಸಿದ್ಧನಾಗಿದ್ದಾನೆ; ಏಕನಿಷ್ಠೆಯಿಂದ ನನಗೆ ಧೂಪವನ್ನು ಅರ್ಪಿಸಿದ್ದಾನೆ. ಅವನನ್ನು ಕರೆದುಕೊಂಡು ಬಾ" ಎಂದು ಬೆಸಸಿದನು. ಆಗ ನಂದಿ, ವೀರಭದ್ರಾದಿಗಳು ಸೌರಾಷ್ಟ್ರಕ್ಕೆ ಬಂದು ದೇವದೇವನು ಹೇಳಿದ್ದ ಗುರುತಿನಂತೆ ಶಿವಾಲಯವನ್ನು ಗುರುತಿಸಿದರು. ದೇವಾಲಯದ ಕದವೆಲ್ಲ ಮುಚ್ಚಿರಲು, ಅದನ್ನು ತೆಗೆಯಲು ಧೈರ್ಯ ಸಾಲದೆ ರಜತಗಿರಿಗೆ ಹಿಂದಿರುಗಿದರು. ಅಲ್ಲಿ ನಂದಿ ಮೊದಲಾದವರು ಶಿವನಿಗೆ "ದೇವ" ಭಕ್ತನು ಸುಖವಾಗಿ ಧೂಪವನ್ನು ಹಾಕುತ್ತಿದ್ದನು. ಕದವನ್ನು ತೆರೆಯಲು

ಅಂಜಿ ಹಾಗೇ ಬ ನೆವು" ಎಂದು ಹೇಳಿಕೊಂಡರು. ಆಗ ಶಿವನ ರಂಗ ಮಂಟಪದ ಹೂವಿನ ಕಲ್ಲನ್ನು ತೆಗೆದು ಭಕ್ತನನ್ನು ಎತ್ತಿಕೊಂಡು ಬನ್ನಿ'' ಎಂದು ಬೆಸಸಿದನು. ನಂದಿ ವೀರಭದ್ರಾದಿಗಳು ಅಂತೆಯೇ ಶಿವಭಕ್ತನನ್ನು ಧೂಪದ ಪಾತ್ರೆಯೊಡನೆ ಎತ್ತಿಕೊಂಡು ಹೋದರು. ಪುಷ್ಪ ವೃಷ್ಟಿಯಾಯಿತು. ದುಂದುಭಿಗಳು ಮೊಳಗಿದುವು. ಇವನ್ನೆಲ್ಲ ನೋಡಿ ಗುರ್ಜರ ದೇಶವೇ ಬೆರಗಾಯಿತು.

ನಂದಿ ವೀರಭದ್ರಾದಿ ಗಣಗಳ ಜೊತೆಯಲ್ಲಿ ಓಹಿಲಯ್ಯನು ರಜತಗಿರಿಗೆ ಹೋದನು. ಅಲ್ಲೆಲ್ಲ ಧೂಪದ ಕಂಪು ತುಂಬಿತು. ಪಾರ್ವತಿಯು ಆ ಕಂಪು ಎಲ್ಲಿಂದ ಬಂತೆಂದು ದೇವನನ್ನು ಕೇಳಿದಳು. ಆದಕ್ಕೆ ಆಭವನು "ನನ್ನ ಭಕ್ತನಾದ ಧೂಪದ ಓಹಿಲಯ್ಯನು ಬಂದನು.'' ಎಂದು ಹೇಳಿದನು ಓಹಿಲನು ಶಂಕರನಿಗೆ ನಮಸ್ಕರಿಸಿ, ಧೂಪವನ್ನು ಅರ್ಪಿಸಿದನು. ಆಗ ಪ್ರೀತಿಯಿಂದ ಶಂಕರನು ಓಹಿಲನನ್ನು ತಕ್ಕೈಸಿ, ನಂದೀಶನನ್ನು ಕುರಿತು ''ಇವನಂತೆ ರಾಜ್ಯವನ್ನು ಬಿಟ್ಟು, ನನ್ನ ಸೇವೆ ಮಾಡಿದವರಿದ್ದಾರೆಯೇ? ಮಾಡಿದ ಸೇವೆಯನ್ನು ಅಲ್ಲಗಳೆಯಲು, ತಿಳಿಯದೆ ಮತ್ತೆ ಸೇವೆ ಮಾಡಿದವರುಂಟೇ? ಇವನಿಗೆ ಸಮಾನರುಂಟೇ? ಎಂದು ಹೊಗಳಿ ಓಹಿಲನಿಗೆ ಗಣಪದವಿಯನ್ನು ಕೊಟ್ಟನು.

# ಒಪ್ಪೋಲೆ

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೧ | ೧ | ಅತಿಭಕ್ತಿ | ಅತಿಭಕ್ತ |
| ೨ | ೮ | ಒಂದುಃಸಾರೆ | ಒಂದು ಸಾರಿ |
| ೪ | ೭ | ಮನಸ್ಸನ್ನ | ಮನಸ್ಸನ್ನು |
| ೭ | ೨೦ | ಪೂಜಾಕ್ರಮ, | ಪೂಜಾಕ್ರಮ. |
| ೯ | ೯ | ಹೊಡೆದನ | ಹೊಡೆದನು |
| ೧೨ | ೧೫ | ನಾಲ್ಕರಷ್ಟ | ನಾಲ್ಕರಷ್ಟು |
| ೧೩ | ೫ | ವಿರುಪಾಕ್ಷನಿಗೆ | ವಿರೂಪಾಕ್ಷನಿಗೆ |
| ೧೫ | ೧೨ | ಕೋಡುವುದು | ಕೊಡುವುದು |
| ೧೮ | ೧-೨ | ಕಲಲ್ಪತೆಯ | ಕಲ್ಪಲತೆಯ |
| ೩೦ | ೫ | ಸಂತೋಷದಿಂದ, | ಸಂತೋಷದಿಂದ. |
| ೩೧ | ೬ | ನಷ್ಮ | ನಮ್ಮ |
| ೩೫ | ೬ | ಸ್ವರ್ಶಶಿಲೆ | ಸ್ಪರ್ಶಶಿಲೆ |
| ೩೮ | ೮ | ಧೈಯನಿಧಿ | ಧೈರ್ಯನಿಧಿ |
| ೪೫ | ೧೯ | ತಂದೆ. | ತಂದೆ, |
| ೪೬ | ೨೦ | ಭೋರರ್ಗರೆದುವು | ಭೋರ್ಗರೆದುವು |
| ೪೮ | ೫ | ಕವಿದ ತಾಯಿತು | ಕವಿದಂತಾಯಿತು |
| ,, | ೨೨ | ಹಿಂದಕೆ | ಹಿಂದಕ್ಕೆ |
| ೪೯ | ೩ | ಆದರಿಂದ | ಆವರಿಂದ |
| ,, | ೧೨ | ವಿಶ್ರಯಿಸಿಕೊಂಡು | ವಿಶ್ರಮಿಸಿಕೊಂಡು |
| ,, | ೧೩ | ಕೌಪಿನವನ್ನು ಬಿಸಿಟು | ಕೌಪೀನವನ್ನು ಬಿಸುಟು |
| ,, | ೧೫ | ಶಿವನನ್ನು | ಶಿವನು |
| ೫೦ | ೬ | ಹೊತ್ತು ತುಂದುಕೊಂಡನು | ಹೊತ್ತುಕೊಂಡನು |
| ೫೧ | ೧೪ | ಎಂಬು | ಎಂದು |
| ೫೨ | ೧೨ | ತಕೈಸಿ | ತಕ್ಕೈಸಿ |